ಜನಪದ ಸೇವಕ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೭ ಅಕ್ಟೋಬರ್-೨೦೦೬ ಸಂಚಿಕೆ-೩



ಸರ್ವೋದಯ ಇಲ್ಲವೆ ಸರ್ವನಾಶ!

ಜನಪದ ವಿಚಾರದಲ್ಲಿ

ಅಕ್ಟೋಬರ್-೨೦೦೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಕ್ಟೋಬರ್-೨೦೦೬
ಸಂಪುಟ-೭
ಸಂಚಿಕೆ-೩

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎ ೦೮೨೩೬ ೨೯೮೭೩೪
e-mail - janapada@yahoo.com

ಗಾಂಧೀಜಿಯ ಒಕ್ಕಲು

ಕುಟಿಲ ಜಟಿಲ ರಾಜಕೀಯವೆಲ್ಲ
ನೇರವಾಯ್ತು ನಿನ್ನ ನಡೆಯಲಿ !
ಹಿಂಸೆಮುಖದಲ್ಲಿದ್ದ ಕ್ರೌರ್ಯವೆಲ್ಲ
ಉಡುಗಿದುದು ಅಹಿಂಸೆ ಬಲದಲಿ !
ಮರೆತ ಸತ್ಯ ಮತ್ತೆ ತಲೆಯನೆತ್ತಿ
ನಿತ್ಯವಾಯ್ತು ನಿನ್ನ ಬದುಕಲಿ !
ಹಗೆಯ ಹರಸುವಂಥ ನಿನ್ನಮೈತ್ರಿ
ಮಿನುಗುತ್ತಿತ್ತು ಮುಗುಳ್ನಗೆಯಲಿ !
ಬಡವರಲ್ಲಿ ಬಡವನಾಗಿ ಬೆಳೆದು ಬಂದೆ ತ್ಯಾಗಿ
ಕಣಕಣವನು ದೇಶಕ್ಕಾಗಿ ಮೀಸಲಿಟ್ಟ ಯೋಗಿ !
ನೀನು ತೊಟ್ಟ ದಿಟ್ಟ ದೀಕ್ಷೆ
ಆಯಿತೆಮಗೆ ಸಕಲ ರಕ್ಷೆ.
ನೋಡಿದೊಡನೆ ನಿನ್ನ ಮೂರ್ತಿ
ಜನತೆಗಾಯ್ತು ನಿತ್ಯ ಸ್ಫೂರ್ತಿ !
ಹೆಂಡ ಕುಡಿಯಬೇಡಿರೆಂದು ಕೈಯ ಮುಗಿದು ಬೇಡಿಕೊಂಡೆ
ನಮ್ಮ ಬಟ್ಟೆ ನಮ್ಮ ನಡತೆ ಮಾನ್ಯವೆನುತ ಕೇಳಿಕೊಂಡೆ
ಸ್ವಾತಂತ್ರ್ಯವೊಂದೆ ನಮ್ಮ ಮಂತ್ರವೆಂದು ಜಪಿಸಿರೆಂದೆ
ಅಪ್ಪಿ ತಪ್ಪಿ ದಾರಿ ಮೀರದಂತೆ ನೀನೆ ನಮ್ಮ ಮುಂದೆ ನಿಂದೆ
ನಿನ್ನ ಜೊತೆಯ ಪಾದಯಾತ್ರೆ ಬಹು ಪವಿತ್ರವೆನಿಸಿತು
ನಿನ್ನ ಜೊತೆಯ ಜೈಲುವಾಸ ಜನರ ಹೆಸರ ಮೆರೆಸಿತು
ನಿನ್ನ ನೆರಳಿನಲ್ಲಿ ದೀನ ಧನಿಕರೆಂಬ ಭೇದ ಮರೆಯಿತು
ನಿನ್ನ ಸನಿಹದಲ್ಲಿ ಶಾಂತಿ,ಸಹನೆ,ನೇಹ ಅಮರವಾಯಿತು!
ನಿನ್ನ ದೀಕ್ಷೆ ಸಫಲವಾಯ್ತು
ಭರತ ಖಂಡ ನಮ್ಮದಾಯ್ತು
ನಿನ್ನ ಕಥೆಯೊ ಮುಗಿಯಿತು
ನಿನ್ನ ಹೆಸರೊ ಉಳಿಯಿತು !

– ಜಿ. ವರದರಾಜರಾವ್

ವಿಚಾರ ದೀಪ್ತಿ

ಅಭಿವೃದ್ಧಿಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ ಎನ್ನುವುದೇ ಅಭಿವೃದ್ಧಿಯ ಮಾನದಂಡವಾಗಿರುವ ಈ ಸಂದರ್ಭದಲ್ಲಿ ಇದು ದಡ್ಡ ಶಿಖಾಮಣಿಗಳ ಮಾನ'ದಂಡ' ಎಂಬುದರ ಹೊರತಾಗಿ ಬೇರಾವ ಪದಗಳಿಂದಲೂ ಈ ಮೂರ್ಖತನವನ್ನು ವಿವರಿಸಲು ಸಾಧ್ಯವಿಲ್ಲ.

ತೀರಾ ಖಾಸಗೀ ವಿಚಾರಕ್ಕೆ ಬನ್ನಿ ಎಲ್ಲರಿಗೂ ಮನೆ ಕಟ್ಟುವ ಆಸೆ ಇರುತ್ತದೆ. ಮನೆಯಂತೂ ಬೇಕೆ ಬೇಕು. ಎಷ್ಟು ದೊಡ್ಡ ಮನೆಯನ್ನು ಬೇಕಾದರೂ ಕಟ್ಟಿ ತೊಂದೆಯಿಲ್ಲ. ಆದರೆ ಮನೆಯ ಎಲ್ಲ ಕೋಣೆಗಳನ್ನೂ ಬಳಸಬೇಕು. ಅದು ಬಿಟ್ಟು ಹತ್ತು-ಹದಿನೈದು ಕೋಣೆಗಳಿರುವ ಮನೆ ಕಟ್ಟಿಕೊಂಡು ಮನೆಯೊಳಗೆ ಒಬ್ಬನೇ ವಾಸಿಸುವುದೆಂದಾದರೆ ಆಗ ಅಭಿವೃದ್ಧಿಗೆ ಹಿನ್ನಡೆ ಉಂಟಾಗುತ್ತದೆ.

ಖರ್ಚು ಮಾಡುವ ಹಣ, ಯೋಜನೆಗಳು, ಫ್ಲೈ ಓವರ್ರು, ಬ್ರಿಜ್ಜುಗಳು ಇವೆಲ್ಲ ಅಭಿವೃದ್ಧಿಯ ಸಾಧನಗಳೇ. ಆದರೆ ಅವೇ 'ಅಭಿವೃದ್ಧಿ'ಯಲ್ಲ ಮತ್ತು ಅವು ಯಾವತ್ತಿಗೂ ಅಭಿವೃದ್ಧಿಯಾಗಿದೆ ಎಂಬುದಕ್ಕೆ ಸಾಕ್ಷಿಗಳಾಗಲಾರವು. ಕೇವಲ ಮನುಷ್ಯ ಜೀವನ ಮಾತ್ರವೇ ಅಭಿವೃದ್ಧಿ ಆಗಿದೆಯೋ ಇಲ್ಲವೋ ಎಂಬುದಕ್ಕೆ ಸಾಕ್ಷಿಯಾಗಿರುತ್ತದೆ. ಮನುಷ್ಯರು ಕೊಂಚ ಉನ್ನತವಾಗಿ, ವಿಶಾಲ ದೃಷ್ಟಿಯಿಂದ ಯೋಚಿಸಲು ಸಾಧ್ಯವಾಗಬೇಕು. ಮನುಷ್ಯರ ನಡವಳಿಕೆಗಳು ಹೆಚ್ಚು ಸಹನೀಯವೂ, ಆಪ್ತವೂ, ಆರೋಗ್ಯಪೂರ್ಣವೂ ಆಗಬೇಕು. ಮನುಷ್ಯರ ಬೌದ್ಧಿಕ, ಭಾವನಾತ್ಮಕ ದೈಹಿಕ ಸಾಮರ್ಥ್ಯವು ಸ್ವಲ್ಪವಾದರೂ ಏರುಗತಿಯನ್ನು ಕಾಣಬೇಕು. ಈ ಪರಿವರ್ತನೆಗಳು ಉಂಟಾದಾಗ ಮನುಷ್ಯರು ತಮ್ಮ ಮಟ್ಟಿಗೆ ಸುಖಕರವಾಗಿ ಬದುಕಲು ಸಾಧ್ಯವಾಗುವ ಭೌತಿಕ ಸಂಪತ್ತನ್ನು ಹೊಂದಬೇಕು. ಅದು ಅಭಿವೃದ್ಧಿಯಾಗಿರುತ್ತದೆ. ಅಭಿವೃದ್ಧಿಯನ್ನು ಅಳೆಯಬೇಕಾದ ಮಾನದಂಡಗಳು ಕೂಡ ಇವೇ ಆಗಿರುತ್ತವೆ. ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೆ ತೋರಿಸುವ 'ಅಭಿವೃದ್ಧಿ'ಯು ಅಭಿವೃದ್ಧಿಯ ಅಪವ್ಯಾಖ್ಯಾನವಾಗಿರುತ್ತದೆ.

-ಗೌತಮ್

ಸರ್ವೋದಯ ಇಲ್ಲವೆ ಸರ್ವನಾಶ!

-ಸುರೇಂದ್ರ ಕೌಲಗಿ

"ಮಾನವಕುಲ ಉಳಿಯಬೇಕಾದರೆ ಮತ್ತು ಉನ್ನತ ಸ್ಥಿತಿಯತ್ತ ಗತಿಶೀಲವಾಗಬೇಕಾದರೆ ಹೊಸ ಬಗೆ ಚಿಂತನೆ ಅಗತ್ಯ" - ಐನ್‌ಸ್ಟೈನ್

ಉರುಳುತ್ತಿರುವ ಒಂದೊಂದು ಶತಮಾನವೂ ಪ್ರಪಂಚವನ್ನು ಸರ್ವನಾಶದ ಅಂಚಿನತ್ತ ತಂದು ನಿಲ್ಲಿಸುತ್ತಿದೆ. ಇಪ್ಪತ್ತೊಂದನೇ ಶತಮಾನ ಈ ವಿಷಯದಲ್ಲಿ ಬಹುದೊಡ್ಡ ಅಪರಾಧಿ ಸ್ಥಾನದಲ್ಲಿದೆ. ಈ ಶತಮಾನದಲ್ಲಿ ಅಲ್ಲಲ್ಲಿ ನಡೆಯುತ್ತಿರುವ ಪ್ರಾದೇಶಿಕ ಯುದ್ಧಗಳಲ್ಲಿ, ಭಯೋತ್ಪಾದಕರ ದಾಳಿಗಳಲ್ಲಿ, ಮೂಲಭೂತವಾದಿಗಳು ನಡೆಸುವ ಘರ್ಷಣೆಗಳಲ್ಲಿ, ವ್ಯಕ್ತಿಗತ ನೆಲೆಯಲ್ಲಿಯ ಹಿಂಸೆಗಳಲ್ಲಿ ಮತ್ತು ವೈಜ್ಞಾನಿಕ ಕಾರಣದಿಂದಾಗಿ ವೇಗವಾಗಿ ಓಡುವ ವಾಹನಗಳ ಅಪಘಾತದಲ್ಲಿ ಸಾಯುವವರ ಸಂಖ್ಯೆ ಬುದ್ಧಿಭ್ರಮಣೆಯಾಗುವಷ್ಟು ದೊಡ್ಡದಾಗಿದೆ.

ಮೂರನೇ ಮಹಾಯುದ್ಧವಾದರೆ ನೂಕ್ಲಿಯರ್ ಬಾಂಬ್ ಸ್ಫೋಟಗಳಿಂದ ಯಾವೊಂದು ಅಗಾಧ ಸಂಖ್ಯೆಯ ಸಾವು-ನೋವುಗಳಾಗುವವೋ ಅಷ್ಟೊ ಸಂಖ್ಯೆಯ ಸಾವು-ನೋವುಗಳು ಇಪ್ಪತ್ತೊಂದನೇ ಶತಮಾನದ ಪ್ರಾರಂಭದಲ್ಲಿಯೇ ಆಗಿದೆ. ಈ ಸಾವು-ನೋವು ಕಡಿಮೆಯಾಗುವ ಯಾವ ಲಕ್ಷಣಗಳೂ ಜಾಗತಿಕ ತೆರೆಯಮೇಲೆ ಕಾಣುತ್ತಿಲ್ಲ. ಬದಲಿಗೆ ಪ್ರಪಂಚದ ನಾಶದ ಗತಿ ತೀವ್ರತಮವಾಗುತ್ತಿರುವ ಎಲ್ಲ ಸಂಕೇತಗಳೂ ಕಾಣುತ್ತಿವೆ. ಪ್ರತಿಯೊಂದು ರಾಷ್ಟ್ರದಲ್ಲಿ ನೂಕ್ಲಿಯರ್ ಸ್ಥಾವರಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ನೂಕ್ಲಿಯರ್ ಅಣುಸ್ಥಾವರಗಳಿಂದ ಹೊರ ಸೂಸುವ ವಿಕಿರಣಗಳಿಂದಾಗುವ ಪ್ರಾಣ ಹಾನಿ ಪರಿಸರ ಹಾನಿಯ ಭೀತಿ ಸದಾ ಇದ್ದೇ ಇರುತ್ತದೆ. ಈಗ ಎಲ್ಲೆಲ್ಲೂ ಆಲ್‌ಖೈದಾ, ತಾಲಿಬಾನ್‌ನಂಥ ಭಯೋತ್ಪಾದಕರ ಸಂಘಟನೆಗಳು ಕ್ರಿಯಾಶೀಲರಾಗುತ್ತಲೇ ನೂಕ್ಲಿಯರ್ ಸ್ಥಾವರಗಳ ರಕ್ಷಣೆ ಬಹು ದೊಡ್ಡ ಸಮಸ್ಯೆಯಾಗುತ್ತದೆ. ಸರ್ಕಾರ ಮತ್ತು ಆಯಾ ಪ್ರದೇಶದ ಜನರು ಭಯಭೀತರಾಗಿರಬೇಕಾಗುತ್ತದೆ. ರಶಿಯಾದ ಚರ್ನೋಬಿಲ್‌ನಲ್ಲಿ ನೂಕ್ಲಿಯರ್ ಸ್ಥಾವರದಿಂದ ಹೊರಬಂದ ವಿಕಿರಣದಿಂದುಂಟಾದ ಪ್ರಾಣ ಹಾನಿಯ ಸ್ಮರಣೆ ಇನ್ನೂ ಹಸಿರಾಗಿಯೇ ಇರುವಾಗ ಹೆಜ್ಜೆ-ಹೆಜ್ಜೆಗೆ ನೂಕ್ಲಿಯರ್ ಸ್ಥಾವರಗಳ ಸ್ಥಾಪನೆಯಾಗುತ್ತಿರುವುದು ಪ್ರಪಂಚದ ವಿನಾಶಕ್ಕೆ ಕಾರಣವಲ್ಲದೆ ಮತ್ತೇನು? ಪ್ರಪಂಚದಲ್ಲಿ ಅಮೇರಿಕಾ ಅತಿ ಹೆಚ್ಚು ಹಣವನ್ನು ಭಯಾನಕ ಶಸ್ತ್ರಾಸ್ತ್ರಗಳ ತಯಾರಿಕೆಗೆ ಖರ್ಚು ಮಾಡುತ್ತಿದೆ. ೨೦೦೫ರಲ್ಲಿಯ ಒಂದು ಮಾಹಿತಿ ಪ್ರಕಾರ ಅಮೇರಿಕಾ

೪೦೦ ಬಿಲಿಯನ್ ಡಾಲರಿಗಿಂತ ಹೆಚ್ಚು ಹಣವನ್ನು ಪ್ರತಿವರ್ಷ ಶಸ್ತ್ರಾಸ್ತ್ರಗಳಿಗಾಗಿ
ಖರ್ಚ ಮಾಡುತ್ತಿದೆ. ಈ ಬೃಹತ್ ಹಣದಿಂದ ತಯಾರಾಗುವ ಶಸ್ತ್ರಾಸ್ತ್ರಗಳು
ಎಲ್ಲಿ ಸಂಗ್ರವಾಗುತ್ತದೆ, ಅವುಗಳ ಉಪಯೋಗ ಎಲ್ಲಿ ಆಗುತ್ತದೆ, ಇವು ಯಾವ
ಅಧಿಕಾರಿಯ ಸುಪರ್ದಿನಲ್ಲಿ ಇವೆ ಈ ಮುಂತಾದ ಪ್ರಶ್ನೆಗಳಿಗೆ ಉತ್ತರ ದೊರೆತಲ್ಲಿ
ಪ್ರಪಂಚ ನಿಶ್ಚಯುವಾಗಿಯೂ ವಿನಾಶದ ಅಂಚಿನಲ್ಲಿ ಇದೆ ಎಂದು
ಮನವರಿಕೆಯಾಗುವುದು. ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ಪ್ರಪಂಚದಾದ್ಯಂತ ಭುಜಕ್ಕೆ
ಭುಜ ಕೊಟ್ಟು ಓಡುವಂಥ ಓಟದ ಸ್ಪರ್ಧೆ ನಡೆಯುತ್ತಿದೆ, ಪ್ರಪಂಚದಲ್ಲಿ ಬಡ
ರಾಷ್ಟ್ರಗಳೆಂಬ ಹಣೆ ಪಟ್ಟಿ ಹೊಂದಿರುವ ಭಾರತ ಮತ್ತು ಪಾಕಿಸ್ತಾನ ಈ
ಸ್ಪರ್ಧೆಯಲ್ಲಿ ತಮ್ಮನ್ನು ಬಹು ಹುಮ್ಮಸಿನಿಂದ ತೊಡಗಿಸಿಕೊಂಡಿವೆ. ಭಾರತ ಪ್ರತಿ
ವರ್ಷ ೧೨ ಬಿಲಿಯುನ್ ಡಾಲರ್ ಹಣವನ್ನು ಈ ಸ್ಪರ್ಧೆಯಲ್ಲಿ
ಉಪಯೋಗಿಸುತ್ತಿದ್ದರೆ, ಪಾಕಿಸ್ತಾನ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದೆ.
ಅತ್ಯಂತ ಭೀಕರವಾದ ಪ್ಲುಟೋನಿಯಮ್ ಸ್ಥಾವರ ಸ್ಥಾಪಿಸುತ್ತಿದೆ. ಈ ಸ್ಥಾವರದ
ನಿರ್ಮಾಣ ಪೂರ್ಣಗೊಂಡ ಮೇಲೆ ಪಾಕಿಸ್ತಾನವು ಪ್ರತಿ ವರ್ಷ ೪೦ರಿಂದ ೫೦
ನ್ಯೂಕ್ಲಿಯರ್ ಶಸ್ತ್ರಾಸ್ತ್ರವನ್ನು ತಯಾರಿಸಲು ಸಮರ್ಥವಾಗುತ್ತದೆ. ಚೀನಾ, ಇರಾನ್,
ಇಂಗ್ಲೆಂಡ್ ದೇಶಗಳು ಕೂಡ ಈ ಪೈಪೋಟಿಯಲ್ಲಿ ಸೇರಿಕೊಂಡಿವೆ. ಅಮೇರಿಕದ
ಸೆನೆಟರ್ ಎಡ್ವರ್ಡ್ ಮಾರ್ಕೆಯ ಪ್ರಕಾರ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ಹೆಚ್ಚುವಿಕೆಯನ್ನು
ಬಲವಾಗಿ ತಡೆಯದಿದ್ದರೆ ಯಾವುದೆ ಒಬ್ಬ ಹುಚ್ಚನ ಕೈಗೆ ಬಾಂಬ್ ಸಿಗಬಹುದು.
ಅವನು ಯಾವ ಉದ್ದೇಶವಿಲ್ಲದಿದ್ದರೂ ಕೇವಲ ಅದನ್ನು ಉಪಯೋಗಿಸಿ
ನೋಡುವುದಕ್ಕಾಗಿಯೇ ಉಪಯೋಗಿಸಬಹುದು! ಉದಾಹರಣೆಗೆ ಯಾವುದೇ
ಒಬ್ಬ ಆಲ್‌ಖೈದಾ ಸದಸ್ಯ ಆಗ ಎಂಥ ವಿನಾಶಕ್ಕೆ ಪ್ರಪಂಚ ತುತ್ತಾಗುತ್ತದೆಂದು
ಊಹಿಸಿ. ಇಂಥ ಅತ್ಯಂತ ಭಯಾನಕ ಶಸ್ತ್ರಾಸ್ತ್ರಗಳ ರಾಶಿಯ ಮೇಲೆ ಕುಳಿತಿರುವ
ಇಂದಿನ ಪ್ರಪಂಚದಲ್ಲಿ ಮತ್ತು ಇಂದಿನ ಕಾಲದಲ್ಲಿ ಯುದ್ಧವೇನಾದರೂ ಸಂಭವಿಸಿದಲ್ಲಿ
ಮತ್ತು ಒಂದು ಬಾಂಬ್ ನ್ಯೂಯಾರ್ಕ್ ನಗರದ ಮೇಲೆ ಬಿದ್ದರೆ ಹತ್ತು ದಶಲಕ್ಷ
ಜನರು ಸಾಯುವರು. ಅದೇ ರೀತಿ ಲಂಡನ್ ನಗರದ ಮೇಲೆ ಬಾಂಬ್ ಬಿದ್ದಲ್ಲಿ
ಹತ್ತು ದಶಲಕ್ಷ ಜನರು ಸಾಯುವರು. ಮಾಸ್ಕೋ ನಗರದ ಮೇಲೆ ಬಾಂಬ್
ಬಿದ್ದಾಗ ಆರು ದಶಲಕ್ಷ ಜನರು ಸಾಯುವರು. ಲೆನಿನ್ ಗ್ರಾಡ್ ಮೇಲೆ ಬಿದ್ದಲ್ಲಿ
ಮೂರು ದಶಲಕ್ಷ ಜನರು ಸಾಯುವರು. ಚಿಕಾಗೊ ನಗರದ ಮೇಲೆ ಬಾಂಬ್
ಬಿದ್ದರೆ ನಾಲ್ಕು ದಶಲಕ್ಷ ಜನರು ಸಾಯುವರು. ಲಾಸ್ ಏಂಜಲೀಸ್ ಮೇಲೆ
ಬಾಂಬ್ ಬಿದ್ದರೆ ಮೂರು ದಶಲಕ್ಷ ಜನರು ಸಾಯುವರು. ಅಲ್ಲದೆ ಈ ಎಲ್ಲ
ನಗರಗಳು ಚಪ್ಪಟೆಯಾಗುವವು. ಅದರ ವಿಸ್ತೀರ್ಣ ಹತ್ತರಿಂದ ಇಪ್ಪತ್ತು
ಮೈಲಿಗಳಷ್ಟಾಗುವುದು. ಆ ನಗರಗಳ ಸುತ್ತಲಿನ ಪ್ರದೇಶವು ವಿಕಿರಣಕ್ಕೆ

ಒಳಗಾಗುವುದರಿಂದ ಹಲವಾರು ವರ್ಷಗಳಕಾಲ ವಾಸಕ್ಕೆ ಯೋಗ್ಯವಾಗಿ ಉಳಿಯುವುದಿಲ್ಲ. ಇಂಥದೆ ಗತಿ ಬೇರೆ ದೇಶಗಳ ಪ್ರಮುಖ ನಗರಗಳದ್ದೂ ಆಗುತ್ತದೆ. ಇದೆಲ್ಲವು ಯುದ್ಧ ನಡೆದ ಕೆಲವೆ ಗಂಟೆಗಳಲ್ಲಿ ನಡೆದು ಹೋಗುತ್ತದೆ. ಈ ಭಯಾನಕ ಸಂಗತಿ ಪ್ರಪಂಚದಲ್ಲಿರುವ ಎಲ್ಲ ದೇಶಗಳ ಎಲ್ಲ ವಿಜ್ಞಾನಿಗಳಿಗೆ ಹಾಗೂ ಎಲ್ಲ ರಾಜಕೀಯ ಮುಖಂಡರಿಗೆ ಗೊತ್ತಿದೆ. ನಾಗಾಸಾಕಿ - ಹಿರೋಶಿಮಾಗಳ ಅನುಭವ ನಮ್ಮ ಮುಂದೆ ಇದೆ. ಹಾಗಿದ್ದೂ ರಾತ್ರಿ ಕಂಡ ಬಾವಿಯಲ್ಲಿ ಹಗಲು ಬೀಳುವ ದಡ್ಡತನವನ್ನು ಈ ಜನ ಏಕೆ ಮಾಡುತ್ತಿದ್ದಾರೆ ? ಪ್ರಪಂಚದ ಹಿತವನ್ನು ಕಾಯಬೇಕಾದ ವಿಶ್ವಸಂಸ್ಥೆ ಯಾವುದೇ ಒಂದು ಬಡ ರಾಷ್ಟ್ರಕ್ಕಿಂತಲೂ ದುರ್ಬಲವಾಗಿದೆ. ಕೆಲವೇ ಬಲಿಷ್ಠ ರಾಷ್ಟ್ರಗಳ ಕೈಗೊಂಬೆಯಾಗಿದೆ. ಎರಡನೇ ಮಹಾ ಯುದ್ಧದ ನಂತರ ಜನ್ಮ ತಾಳಿದ ವಿಶ್ವ ರಾಷ್ಟ ಸಂಸ್ಥೆ ಇದುವರೆಗೆ ರಾಷ್ಟ್ರ-ರಾಷ್ಟ್ರಗಳ ಮಧ್ಯದಲ್ಲಿ ನಡೆಯುತ್ತಿರುವ ಯಾವ ಕದನವನ್ನೂ ನಿಲ್ಲಿಸಲು ಸಾಧ್ಯವಾಗಿಲ್ಲ. ಶಸ್ತ್ರಾಸ್ತ್ರಗಳ ಪೈಪೋಟಿಯನ್ನೂ ತಪ್ಪಿಸಲು ಸಾಧ್ಯವಾಗಿಲ್ಲ.

ಶಸ್ತ್ರಾಸ್ತ್ರಗಳ ಪೈಪೋಟಿಗೆ ಉರುವಲಾಗಿ ಧಾರ್ಮಿಕ ಮತಾಂಧತೆ ಕೆಲಸ ಮಾಡುತ್ತಿದೆ. ಪ್ರಪಂಚದ ಎರಡು ಮಹಾ ಧರ್ಮಗಳಾದ ಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮಗಳು ಪರಸ್ಪರರ ರಕ್ತವನ್ನು ಹೀರುವುದಕ್ಕೆ ಸನ್ನದ್ಧವಾಗುತ್ತಿವೆ. ಯಹೂದ್ಯರು ಮತ್ತು ಅರಬ್ಬರ ಮಧ್ಯೆ ಹೋರಾಟ ಪ್ರಾರಂಭವಾಗಿ ಅರ್ಧ ಶತಮಾನವೇ ಕಳೆಯಿತು. ಆದರೂ ವರ್ಷದಿಂದ ವರ್ಷಕ್ಕೆ ಅವುಗಳ ಕಾದಾಟ ನಡೆಯುತ್ತಲೇ ಇದೆ. ರಕ್ತದ ಹೊಳೆ ಹರಿಯುತ್ತಲೇ ಇದೆ. ವಿಶ್ವರಾಷ್ಟ ಸಂಸ್ಥೆ ಈ ವಿವಾದದ ಬಗ್ಗೆ ಕೈಚೆಲ್ಲಿ ಕುಳಿತಿದೆ.

ಶಸ್ತ್ರಾಸ್ತ್ರಗಳ ಪೈಪೋಟಿಗೆ ಇನ್ನೊಂದು ಪ್ರಮುಖ ಕಾರಣ ಪ್ರಾಕೃತಿಕ ಸಂಪತ್ತಿನ ಮೇಲೆ ಒಡೆತನ ಸ್ಥಾಪಿಸುವ ಉದ್ದೇಶ. ಇಂದಿನ ಎಲ್ಲ ಕೈಗಾರಿಕೆ ಮತ್ತು ಸಂಚಾರ ವ್ಯವಸ್ಥೆಗೆ ಮೂಲ ವಸ್ತುವಾದ ತೈಲ, ಕೆಲವೇ ರಾಷ್ಟ್ರಗಳ ಸೊತ್ತಾಗಿದೆ. ಅದು ಶ್ರೀಮಂತಿಕೆಯತ್ತ ಹೋಗುವ ಸಾಧನವೂ ಆಗಿದೆ. ಜಾಗತೀಕರಣದ ಮಂತ್ರವನ್ನು ಸದಾ ಜಪಿಸಲಾಗುತ್ತಿದೆ. ಆದರೆ ಪ್ರಪಂಚದಲ್ಲಿರುವ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಜಗತ್ತಿನ ಎಲ್ಲ ರಾಷ್ಟ್ರಗಳ ಹಕ್ಕು ಇದೆಯೆಂಬ ಪ್ರಜ್ಞೆ ಮಾತ್ರ ಮೂಡಿಲ್ಲ. ಕೆಲವೇ ಬಲಿಷ್ಠ ರಾಷ್ಟ್ರಗಳು ಪ್ರಪಂಚದ ಎಲ್ಲ ನೈಸರ್ಗಿಕ ಸಂಪನ್ಮೂಲದ ಮೇಲೆ ಒಡೆತನ ಸಾಧಿಸಿ, ಜಾಗತೀಕರಣದ ಪ್ರಕ್ರಿಯೆಯು ತಮ್ಮ ಹಿತಾಸಕ್ತಿಗನುಗುಣವಾಗಿ ನಡೆಯಲೆಂಬ ಗುಪ್ತ ಆಲೋಚನೆಯನ್ನಿಟ್ಟುಕೊಂಡಿವೆ. ಈ ಕಾರಣದಿಂದ ಪ್ರಪಂಚದ ರಾಷ್ಟ್ರಗಳು ಮೂರು ಪ್ರಕಾರದ ಆರ್ಥಿಕ ವಲಯಗಳಲ್ಲಿ ಹಂಚಿ ಹೋಗಿವೆ. ಶ್ರೀಮಂತ ರಾಷ್ಟ್ರಗಳು, ಮುಂದುವರಿಯುತ್ತಿರುವ ರಾಷ್ಟ್ರಗಳು ಮತ್ತು ಹಿಂದುಳಿದಿರುವ ರಾಷ್ಟ್ರಗಳು ಎಂಬುದಾಗಿ.

ಭೂಮಿಯ ಮೇಲೆ ಪೈಪೋಟಿ ಸಾಲದೆಂಬಂತೆ ಆಕಾಶದಲ್ಲಿ ಮತ್ತು ಆಕಾಶ ಕಾಯಗಳ ಮೇಲೆ ಪ್ರಭುತ್ವ ಸ್ಥಾಪಿಸುವಲ್ಲಿಯೂ ಪೈಪೋಟಿ ನಡೆಯುತ್ತಿದೆ.

ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿಯ ಪೈಪೋಟಿ, ಆಕಾಶದಲ್ಲಿ ಸ್ಥಾನ ಪಡೆಯುವುದಕ್ಕಾಗಿ ಪೈಪೋಟಿ. ಈ ಪೈಪೋಟಿಗಳ ಹಿಂದಿರುವ ಉದ್ದೇಶವೇನು? ಮಾನವ ಕುಲದ ಯಾವ ಹಿತಸಾಧನೆಗಾಗಿ ಈ ಪೈಪೋಟಿಯೆಂಬುದು ಗೊತ್ತಾಗಿಲ್ಲ. ಈಗ ನಮಗೆ ಕಾಣುತ್ತಿರುವುದು ಪೈಪೋಟಿಗಾಗಿ ಪೈಪೋಟಿ. ಇದು ಶುಷ್ಕ ಪೈಪೋಟಿ. ಅರ್ಥ ಹೀನ ಪೈಪೋಟಿ. ಇಂಥ ಪೈಪೋಟಿಯಿಂದ, ಮುಖ್ಯವಾಗಿ ವಿನಾಶಕಾರಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದ ಯಾವ ಪ್ರಯೋಜನವೂ ಇಲ್ಲ, ಸಾಧನೆಯೂ ಇಲ್ಲ. ಅದರಲ್ಲಿ ಮಾನವಕುಲದ ವಿನಾಶದ ಬೀಜಗಳಿವೆ ಎಂದು ಪ್ರಪಂಚದ ವಿಜ್ಞಾನಿಗಳ ಸಮೂಹವೇ ಸ್ಪಷ್ಟವಾಗಿ ತಿಳಿಸಿದೆ. ನೊಬೆಲ್ ಪ್ರಶಸ್ತಿ ಪಡೆದ ೫೨ ವಿಜ್ಞಾನಿಗಳು ೧೯೧೭ ರಲ್ಲಿ ಒಟ್ಟು ಸೇರಿ ಈ ಕೆಳಗಿನಂತೆ ಹೇಳಿಕೆ ಕೊಟ್ಟಿದ್ದಾರೆ. ಇವರಲ್ಲಿ ಶ್ರೇಷ್ಠ ಚಿಂತಕ ಬರ್ಟ್ರಂಡ್ ರಸೆಲ್ ಒಬ್ಬರು.

"ಈ ಕೆಳಗೆ ಹಸ್ತಾಕ್ಷರ ಹಾಕಿರುವ ನಾವು ವಿವಿಧ ದೇಶಗಳಿಗೆ ಸೇರಿದ, ವಿವಿಧ ಜನಾಂಗಗಳಿಗೆ ಸೇರಿದ, ವಿವಿಧ ರಾಜಕೀಯ ವಿಚಾರಗಳನ್ನು ಹೊಂದಿರುವ ವಿಜ್ಞಾನಿಗಳಾಗಿದ್ದೇವೆ. ಬಾಹ್ಯವಾಗಿ ನೊಬೆಲ್ ಪ್ರಶಸ್ತಿಯಿಂದ ಬಾಂಧವ್ಯ ಹೊಂದಿದವರಾಗಿದ್ದೇವೆ. ನಾವು ಸಂತೋಷದಿಂದ ನಮ್ಮ ಜೀವನವನ್ನು ವಿಜ್ಞಾನದ ಸೇವೆಗಾಗಿ ಮುಡುಪಾಗಿಟ್ಟಿದ್ದೇವೆ. ವಿಜ್ಞಾನವು ಜನರಿಗೆ ಸುಖ ಜೀವನವನ್ನು ಕೊಡುವ ಒಂದು ಮಾರ್ಗವೆಂದು ನಾವು ನಂಬಿದ್ದೇವೆ. ಆದರೆ ಈಗ ಭಯಭೀತರಾಗಿ ಈ ವಿಜ್ಞಾನವೆ ಮಾನವ ಕುಲಕ್ಕೆ ತನ್ನ ಆತ್ಮಹತ್ಯೆ ಮಾಡಿಕೊಳ್ಳುವ ಸಾಧನಗಳನ್ನು ಒದಗಿಸುತ್ತಿದೆಯೆಂಬುದನ್ನು ನಾವು ನೋಡುತ್ತಿದ್ದೇವೆ. ಇಂದು ಲಭ್ಯವಿರುವ ಶಸ್ತ್ರಾಸ್ತ್ರಗಳನ್ನು ಸೈನ್ಯಾಚರಣಕ್ಕಾಗಿಯೆ ಉಪಯೋಗಿಸಿಕೊಂಡಲ್ಲಿ ಈ ಭೂಮಿಯು ವಿಕಿರಣತೆಯಿಂದ ಆವೃತಗೊಂಡು ಇಡೀ ಮಾನವಕುಲವೆ ನಿರ್ನಾಮವಾಗುವುದು. ಹೋರಾಟದಲ್ಲಿ ತೊಡಗಿರುವವರು ಮತ್ತು ತಟಸ್ಥರಾಗಿರುವವರೂ ಮರಣ ಹೊಂದುವರು. ಇಂದು ದೊಡ್ಡ ರಾಷ್ಟ್ರಗಳ ಮಧ್ಯೆ ಯುದ್ಧ ಪ್ರಾರಂಭವಾದರೆ ಆ ಯುದ್ಧವು ಭಯಾನಕ ಯುದ್ಧವಾಗಲಾರದೆಂದು ಯಾರು ಭರವಸೆಕೊಡಬಲ್ಲರು? ಯುದ್ಧದಲ್ಲಿ ತೊಡಗಿಕೊಳ್ಳುವ ದೇಶವು ತನ್ನ ನಾಶವನ್ನು ತಾನೆ ಆಹ್ವಾನಿಸಿಕೊಳ್ಳುವುದಲ್ಲದೆ ಇಡೀ ವಿಶ್ವವನ್ನೇ ಅಪಾಯಕ್ಕೊಡ್ಡುತ್ತದೆ. ಶಸ್ತ್ರಾಸ್ತ್ರಗಳ ಭಯದ ಕಾರಣದಿಂದಾಗಿ ಇಂದು ಶಾಂತಿಯನ್ನು ಕಾಪಾಡಿಕೊಂಡು ಬರಲಾಗುತ್ತಿದೆಯೆಂಬ ಸಂಗತಿಯನ್ನು ನಾವು ನಿರಾಕರಿಸುವುದಿಲ್ಲ. ಆದಾಗ್ಯೂ ಈ ಶಸ್ತ್ರಾಸ್ತ್ರಗಳ ಭಯದ ಕಾರಣದಿಂದಾಗಿ ದೀರ್ಘಕಾಲ ಯುದ್ಧವನ್ನು ತಪ್ಪಿಸಬಹುದೆಂದು ಸರ್ಕಾರಗಳು ನಂಬಿದ್ದರೆ ಅದು ಮರೀಚಿಕೆಯೆಂದು ನಾವು

ಭಾವಿಸುತ್ತೇವೆ. ಭಯ ಮತ್ತು ಉದ್ವಿಗ್ನತೆ ಆಗಾಗ್ಗೆ ಯುದ್ಧಗಳು ಸಂಭವಿಸುವಂತೆ ಮಾಡಿವೆ. ಅದೇ ರೀತಿ ಸಣ್ಣ ಪ್ರಮಾಣದ ಸಮರಗಳ ಇತ್ಯರ್ಥ ಭವಿಷ್ಯದಲ್ಲಿ ಪರಂಪರಾಗತ ಶಸ್ತ್ರಾಸ್ತ್ರಗಳಿಂದ ತೀರ್ಮಾನಿಸಲ್ಪಡುವುದೆಂಬುದು ಕೂಡ ಮರೀಚಿಕೆಯೆ ಸರಿ. ಅತ್ಯಂತ ಅಪಾಯದ ಸ್ಥಿತಿಯಲ್ಲಿ ಯಾವ ದೇಶವೂ ವೈಜ್ಞಾನಿಕ ಕಾರಣದಿಂದಾಗಿ ತಯಾರಿಸಬಹುದಾದ ಶಸ್ತ್ರಾಸ್ತ್ರದಿಂದ ತನ್ನನ್ನು ತಾನು ವಂಚಿತ ಮಾಡಿಕೊಳ್ಳಲಾರದು.

ಎಲ್ಲ ರಾಷ್ಟ್ರಗಳು ಬಲತ್ಕಾರವನ್ನು ತಮ್ಮ ಅಂತಿಮ ನೀತಿಯೆಂದು ತ್ಯಜಿಸಬೇಕು. ಹಾಗೇನಾದರೂ ಅವು ಮಾಡಲು ಸಿದ್ಧವಿಲ್ಲದಿದ್ದರೆ ಅವುಗಳ ಅಸ್ತಿತ್ವವೆ ಇಲ್ಲವಾಗುವುದು ಖಚಿತ."

ಇದು ಜಾಗತಿಕಮಟ್ಟದ ಸ್ಥಿತಿಯಾದರೆ ಗ್ರಾಮ ಮಟ್ಟದ ಸ್ಥಿತಿಯೇನೂ ಭಿನ್ನವಿಲ್ಲ. ಈಗ ಸ್ಥಾಪಿತಗೊಂಡಿರುವ ಗ್ರಾಮ ಪಂಚಾಯಿತಿಗಳು ತಮ್ಮೊಳಗಿನ ಮನಸ್ತಾಪ, ಒಳಜಗಳ, ಸ್ವಾರ್ಥ ಇತ್ಯಾದಿಗಳ ಕಾರಣದಿಂದಾಗಿ ಗ್ರಾಮಜೀವನವನ್ನು ಹಿಂಸಾಮಯವನ್ನಾಗಿ ಮಾಡಿವೆ. ಗ್ರಾಮ ಪಂಚಾಯಿತಿಗಳ ಮೂಲಕ ಅಭಿವೃದ್ಧಿ ಎಂಬ ಯೋಜನೆಯು ಗ್ರಾಮ ಜೀವನದ ಕುತ್ತಿಗೆಯನ್ನು ಬಿಗಿಯುವ ಹಗ್ಗವಾಗಿದೆ. ದಿಲ್ಲಿಯಲ್ಲಿಯ ತತ್ತ್ವ ರಹಿತ ರಾಜಕಾರಣ ಹಳ್ಳಿಯಲ್ಲಿ ಪ್ರತಿಫಲಿತಗೊಳ್ಳುತ್ತಿದೆ. ದೇಶದ ೧೦೩ ಕೋಟಿ ಪ್ರಜಾ ಸಂಖ್ಯೆ ಹಿಂಸೆ, ಅಶಾಂತಿ, ಉದ್ವಿಗ್ನತೆಯ ವಾತಾವರಣದಲ್ಲಿ ಉಸಿರಾಡುತ್ತಿದೆ. ಇಂಥ ಪರಿಸ್ಥಿತಿಯಿಂದ ಅಮೇರಿಕಾ, ಚೀನಾ, ರಶಿಯಾ,ಇಂಗ್ಲೆಂಡ್ ದೇಶಗಳ ಜನರೂ ಹೊರತಾಗಿಲ್ಲ. ಭೌತಿಕ ಜೀವನದ ಸುಖದ ಆಸೆ ಮಾನವ ಕುಲವನ್ನು ಸರ್ವನಾಶದತ್ತ ಮುಖಮಾಡಿ ನಿಲ್ಲಿಸಿದೆ. ವಿನಾಶದ ಘಳಿಗೆ ಕೂಡಿ ಬರುತ್ತಲಿದೆ. ಸಮಯವನ್ನು ಯಾರೂ ತಡೆ ಹಿಡಿಯಲಾರರು, ಆದರೆ ತಮ್ಮ ಕ್ರಿಯೆಯ ಮೇಲೆ, ಚಿಂತನೆಯ ಮೇಲೆ ಹಿಡಿತ ಸಾಧಿಸಬಹುದು. ಆದ್ದರಿಂದ ವಿಜ್ಞಾನಿ ಐನ್‌ಸ್ಟೈನ್ ಹೇಳಿರುವಂತೆ ಸರ್ವನಾಶ ತಪ್ಪಿಸುವುದಕ್ಕಾಗಿ ಹೊಸ ಬಗೆಯ ಚಿಂತನೆ ಅಗತ್ಯವಾಗಿದೆ. ಆ ಹೊಸ ಚಿಂತನೆ ವಿಶ್ವವನ್ನೆಲ್ಲ ಒಗ್ಗೂಡಿಸುವಂಥ ಚಿಂತನೆಯೇ ಆಗಿರಬೇಕಲ್ಲದೆ, ಬೇರೊಂದಲ್ಲ. ಒಂದು ವಿಶ್ವ ಸರ್ಕಾರದತ್ತ, ಒಂದು ವಿಶ್ವ ಅರ್ಥ ವ್ಯವಸ್ಥೆಯತ್ತ ಒಂದು ಸಮಾನ ಸಮಾಜದತ್ತ ಹೋಗುವ ಚಿಂತನೆ ತೀವ್ರತಮವಾಗಿ ನಡೆಯಬೇಕಿದೆ. ಅದರ ಫಲ ಸರ್ವೋದಯ ಸಮಾಜ ರಚನೆ. "ಕೊನೆಗೊಂಡಿತೊ ಓರ್ಬ್ಬೋರ್ವರ ಗರ್ವದಕಾಲ, ಇದು ಸರ್ವರಕಾಲ! ಸರ್ವೋದಯ, ಸರ್ವೋದಯ ಯುಗ ಮಂತ್ರ" ಎಂಬ ಕುವೆಂಪುರವರ ಆಶಯ ದನಿಗೆ ನಮ್ಮ ದನಿಯನ್ನೂ ಸೇರಿಸುವಾ.

* * * *

ಸಾಧಕರ ಅಮೃತ ಘಳಿಗೆಗಳು

-ಕೆ.ಆರ್.ಶ್ರೀನಿವಾಸನ್

(ಸಮಾಜದ ಏಳಿಗೆಗಾಗಿ ದುಡಿದ ವಿವಿಧ ಕ್ಷೇತ್ರಗಳ ಸಾಧಕರಿಗೆ ಎದುರಾದ ಸಮಸ್ಯೆಗಳಿಗೆ ಪರಿಹಾರವು ಒಂದು ವಿಶೇಷ ಅಮೃತಘಳಿಗೆಯಲ್ಲಿ ದೊರೆಯುತ್ತಾ ಬಂದಿದೆ. ಅಂಥ ವಿವಿಧ ಸಾಧಕರ ಜೀವನದಲ್ಲಿಯ ಅಮೃತ ಘಳಿಗೆಯ ಪ್ರಸಂಗವನ್ನು ಈ ಲೇಖನದಲ್ಲಿ ವಿವರಿಸಲಾಗಿದೆ. ಗಾಂಧೀಜಿಯವರು ಸಹ ತಮ್ಮ ಜೀವನದಲ್ಲಿ ಇಂಥ ಅಮೃತ ಘಳಿಗೆಯನ್ನು ಅನುಭವಿಸಿದ್ದರು.)

ನೋಬೆಲ್ ಪಾರಿತೋಷಕ ಪಡೆದ ಫ್ರೆಡರಿಕ್ ಬ್ಯಾಂಟಿಂಗ್, ೧೯೨೦ರಲ್ಲಿ ಇನ್ನೂ ಓರ್ವ ಅಜ್ಞಾತ ಶಸ್ತ್ರ ವೈದ್ಯನಾಗಿದ್ದ. ಅವನಾಗ ಸಾವು ಬದುಕುಗಳ ಸಮಸ್ಯೆಯೊಂದರ-ಭಯಂಕರ ವ್ಯಾಧಿ 'ಮಧು ಮೇಹ'ದ ಕಾರಣ ಶೋಧಿಸಲು ಹೆಣಗುತ್ತಿದ್ದ.

ಅಂದಿನ ದಿನಗಳಲ್ಲಿ ಮಧುಮೇಹದಿಂದ ಬಳಲುವ ವ್ಯಕ್ತಿ ಮರಣದಂಡನೆಗೆ ಗುರಿಯಾದನೆಂದೇ ಲೆಕ್ಕವಾಗಿತ್ತು. ಶ್ವಾನಗಳ ಮೇಲೆ ಬ್ಯಾಟಿಂಗ್ ಹಲವಾರು ಪ್ರಯೋಗಗಳನ್ನು ಸಾಗಿಸಿದ್ದ. ಅವನು ಪರಿಹಾರದ ಅತೀವ ಸಮೀಪದಲ್ಲಿದ್ದೇನೆ' ಎಂದು ಅರಿತಿದ್ದ ಆದರೆ, ಅದು ಪ್ರತಿಸಲ ಅವನಿಂದ ನುಣುಚಿಕೊಂಡು ನಿರಾಶೆಯನ್ನು ಹೆಚ್ಚಿಸುತ್ತಿತ್ತು.

ಅಕ್ಟೋಬರದ ಒಂದು ರಾತ್ರಿ, ದಿನದ ಪರಿಶ್ರಮದ ದಣಿವಿನಲ್ಲಿ ಅವನು ಶಯನಗೃಹಕ್ಕೆ ತೆರಳಿದ. ನಸುಕಿನ ಎರಡು ಗಂಟೆಗೆ ಅವನಿಗೆ ಅಕಸ್ಮಾತ್ ಎಚ್ಚರವಾಯಿತು ಮತ್ತು ಯಾವಾಗಲೂ ಹಾಸಿಗೆ ಬಳಿ ಇಡುತ್ತಿದ್ದ ಮೇಜಿನ ಮೇಲಿನ ಟಿಪ್ಪಣಿ ಪುಸ್ತಕದಲ್ಲಿ ನಿದ್ದೆಗಣ್ಣಿನಲ್ಲೆ ಮೂರು ವಾಕ್ಯಗಳನ್ನು ಬರೆದ ೧) "ಶ್ವಾನಗಳ ಮೇದೋಜೀರಕ ಗ್ರಂಥಿಗೆ ನಳಿಗೆಯನ್ನು ಕಟ್ಟು. ೨) ಆರರಿಂದ ಎಂಟು ವಾರಗಳವರೆಗೆ ಕ್ಷೀಣಿಸಲು ಬಿಡು. ೩) ಶೇಷವನ್ನು ಬೇರ್ಪಡಿಸು ಮತ್ತು ಉದ್ಧೃತಿ ತೆಗೆ."

ಇವೇ ವಿಲಕ್ಷಣವಾದ ವಾಕ್ಯತ್ರಯಗಳು ಅಂತಿಮವಾಗಿ, "ಮೇದೋಜೀರಕ ರಸಗ್ರಂಥಿ ಅವಶ್ಯಕವಾದ ಹಾರ್ಮೋನ್ ಇನ್ಸುಲಿನ್‌ನನ್ನು ಪ್ರಸ್ರವಿಸುವುದರಲ್ಲಿ ವಿಫಲವಾಗುವುದೇ ಮಧುಮೇಹ ವ್ಯಾಧಿಯ ಮೂಲ" ಎಂಬ ಸಂಶೋಧನೆಗೆ

ಬ್ಯಾಂಟಿಂಗನನ್ನು ಸಾಗಿಸಿದವು. ವೈದ್ಯಕೀಯ ಇತಿಹಾಸವನ್ನು ನಿರ್ಮಿಸಿದ ಹಾಗೂ ಲಕ್ಷಾವಧಿ ಮಧುಮೇಹಿಗಳಿಗೆ ನವಜೀವನವನ್ನಿತ್ತ ಮಹಾಸಂಶೋಧನೆ ಅದಾಗಿತ್ತು. ಈ ಸಂಶೋಧನೆಯ ಒಂದು ಅತ್ಯಂತ ಮಹತ್ವದ ಅಂಶವೆಂದರೆ, ಬ್ಯಾಂಟಿಂಗ್ ಶೋಧಿಸಿದ ಪರಿಹಾರ ಅವನಿಗೆ 'ಅನಿರೀಕ್ಷಿತವಾಗಿ' ನಿದ್ರೆಯ ಅಂತ್ಯದಲ್ಲಿ ದೊರೆತಿತ್ತು.

ಬರ್ಟ್ರಂಡ್ ರಸೆಲ್, ತನ್ನ ಪ್ರಾರಂಭಿಕ ಜೀವನದಲ್ಲಾದ ಸದೃಶ ಅನುಭವವನ್ನು ತನ್ನ ಆತ್ಮಕಥೆಯಲ್ಲಿ ವಿವರಿಸಿದ್ದಾನೆ. ಆಗ ಅವನು ತನ್ನ ಪ್ರಖ್ಯಾತ ಕೃತಿಯಾದ "ದಿ ಪ್ರಿನ್ಸಿಪಲ್ ಆಫ್ ಮೆಥಮ್ಯಾಟಿಕ್ಸ್" ರಚಿಸಿದ್ದನು. ಅದಕ್ಕಾಗಿ ಅವನು ನಿಯಮಿತವಾಗಿ ತನ್ನ ಪೂರ್ವಾಶ್ರಮದ ಖಾಸಗಿ ಶಿಕ್ಷಕ ಹಾಗೂ ಈಗ ಸಂಗಾತಿಯಾದ ವ್ಹೈಟ್‌ಹೆಡ್ ಸಹಕಾರವನ್ನು ಪಡೆಯುತ್ತಿದ್ದನು. ಪ್ರತಿನಿತ್ಯ ಬೆಳಿಗ್ಗೆ ಅವರೀರ್ವರು ಸಮಾಗಮಿಸಿ ಕೃತಿಯಲ್ಲಿ ಅಳವಡಿಸಬೇಕಾದ ಸಮಸ್ಯೆಯೊಂದರ ಬಗ್ಗೆ ತೀಕ್ಷ್ಣವಾಗಿ ಪರಿಶೀಲಿಸುತ್ತಿದ್ದರು ಮತ್ತು ಯಾವುದೇ ಪರಿಹಾರ ಕಾಣದೆ ವಿದಾಯಹೇಳುತ್ತಿದ್ದರು. ಆದರೆ ರಸೆಲ್ ರಾತ್ರಿಯ ಹಿತಕಾರಕ ನಿದ್ರೆಯಿಂದ ಎದ್ದಾಗ ಪರಿಹಾರ ತನ್ನಷ್ಟಕ್ಕೆ ತಾನೇ ಅವನಿಗೆ ಹೊಳೆಯುತ್ತಿತ್ತು. ಅವನ ಮನಸ್ಸಿನ ಈ ಗೂಢ ಶಕ್ತಿ ಎಷ್ಟು ವಿಶ್ವಾಸಾರ್ಹವಾಗಿತ್ತೆಂದರೆ ರಸೆಲ್ ತನ್ನ ಕೃತಿ ರಚನೆಯುದ್ದಕ್ಕೂ ನಿಯಮಿತವಾಗಿ ಅದನ್ನು ಉಪಯೋಗಿಸಿದನು.

ಇದೇ ರೀತಿಯಲ್ಲಿ ವಿಜ್ಞಾನಿಗಳೂ, ಗಣಿತಜ್ಞರೂ, ತತ್ವಜ್ಞಾನಿಗಳೂ ನಮಗಿನ್ನೂ ಅರ್ಥವಾಗದ ಈ ಮಾನಸಿಕ ವ್ಯಾಪಾರದಿಂದ ಮಹತ್ವದ ಸಂಶೋಧನೆಗಳನ್ನು ಮಾಡಿದ, ಭಯಂಕರ ಸಮಸ್ಯೆಗಳಿಗೆ ಪರಿಹಾರ ಶೋಧಿಸಿದ ಅಗಣಿತ ಉದಾಹರಣೆಗಳು ಮಾನವನ ಇತಿಹಾಸದಲ್ಲಿವೆ.

ಬಹುಶಃ ಅನಾದಿಯಿಂದ ಈ ವರೆಗಿನ ಪ್ರತಿಭಾವಂತ ವ್ಯಕ್ತಿಗಳ ಕೃತಿಗಳನ್ನು ಅಭ್ಯಸಿಸಿದರೆ, ಅವರೆಲ್ಲ ಮನಸ್ಸಿನ ಈ ವಿಲಕ್ಷಣ ಶಕ್ತಿಯಿಂದ ಅಮಿತ ಪ್ರಯೋಜನ ಪಡೆದವರಾಗಿದ್ದರೆಂಬುದು ವ್ಯಕ್ತವಾಗುತ್ತದೆ.

ಈ ಮಹಾಪುರುಷರು ಮಾನಸಿಕ ಶಿಲಾಕೋಟೆಯಲ್ಲಿ ದಿಙ್ಮೂಢರಾದಾಗ– ಅವರ ಜಾಗ್ರತ ವಿಚಾರ ಶಕ್ತಿ ಅವಶ್ಯಕ ಫಲಕೊಡಲು ಅಶಕ್ತವಾದಾಗ ಅವರ ಅವಚೇತನ ಮನ ಅವರ ಸಹಾಯಕ್ಕೆ ಧಾವಿಸಿ ಬಂದಂತೆ ಕಾಣುತ್ತದೆ.

ಸೇಂದ್ರೀಯ ರಸಾಯನಶಾಸ್ತ್ರದ ಆಸ್ತಿವಾರವೆನಿಸಿದ ಬೆಂಝೀನ್ ಅಣುವಿನ ಷಟ್ಕೋನ ರಚನೆಯೂ ಅವಚೇತನದ ಮಾನಸಿಕ ಪ್ರತಿಕ್ರಿಯೆಯ ಫಲವಾಗಿದೆ. ಅದನ್ನು ಸೂಚಿಸಿ ಸುಪ್ರಸಿದ್ಧ ಜರ್ಮನ್ ರಸಾಯನ ಶಾಸ್ತ್ರಜ್ಞನಾದ ಆಗಸ್ಟ್ ಕೆಕುಲೆ, ಹೈಡೆಲ್‌ಬರ್ಗ್‌ನಲ್ಲಿ ಛಾತ್ರನಗಿದ್ದಾಗಿನಿಂದಲೂ ಬೆಂಝೀನ್‌ನ ವಿವಿಧ ಪ್ರತಿಕ್ರಿಯೆಗಳನ್ನು

ವಿವರಿಸಲು ಒಂದು ರಚನೆಗಾಗಿ ತನ್ನ ಮಿದುಳನ್ನು ಹಿಂಡುತ್ತಿದ್ದನು. ಬಹುಶಃ ಆ ಸಮಸ್ಯೆಗಳು ಅವನ ಮನಸ್ಸಿನಿಂದ ಕದಲಲೇ ಇಲ್ಲ.

ತದನಂತರ ಕೆಕುಲೆ ಲಂಡನ್ನಿಗೆ ತೆರಳಿದ. ೧೮೬೫ರಲ್ಲಿ ಒಂದು ದಿನ ಆತ ಘೆಂಟ್‌ನಲ್ಲಿಯ ಸ್ವಗೃಹದಲ್ಲಿ ಅಗ್ನಿಕುಂಡದ ಬಳಿ ತೂಕಡಿಸುತ್ತ ಕುಳಿತಿದ್ದಾಗ ವಿಲಕ್ಷಣವಾದ ಅದ್ಭುತವಾದ ಸ್ವಪ್ನ ನೋಟವೊಂದು ಅವನಿಗೆ ಧೃಗ್ಗೋಚರವಾಯಿತು.

ಸರ್ಪವೊಂದು ತನ್ನ ಬಾಲವನ್ನೇ ಕಚ್ಚಿಕೊಂಡು ಸುತ್ತಲೂ ತಿರುಗುತ್ತಿದ್ದುದನ್ನು ಅವನು ಕಂಡನು ಮತ್ತು ಮಿಂಚಿನಂತೆ ರಹಸ್ಯ ಸ್ವಯಂ ಅವನಿಗೆ ಅಭಿವ್ಯಕ್ತವಾಯಿತು. ಆ ಕ್ಷಣದಲ್ಲಿ ಅವನು ಬೆಂಝಿನ್ ಅಣುವಿನ ರಚನೆ ಷಟ್ಕೋನಾಕೃತಿಯ ಉಂಗುರವೆಂದು ಮನಗಾಣಿಸಲ್ಪಟ್ಟನು. ಅನೇಕ ವರ್ಷಗಳ ತರುವಾಯ ಅವನ ತನ್ನ ವಿಜ್ಞಾನಿ ಸೋದರರಿಗೆ ಈ ಉಪದೇಶವನ್ನಿತ್ತ: “ಕನಸು ಕಾಣುವುದನ್ನು ಕಲಿಯೋಣ ಸಭ್ಯಗೃಹಸ್ಥರೇ, ಆಗ ಬಹುಶಃ ನಾವು ‘ಸತ್ಯ’ ಶೋಧಿಸೇವು!”.

ಸ್ವಚ್ಛಂದವಾಗಿ ‘ಅವಚೇತನ’ ವ್ಯಾಪಾರವೆಂದು ಕರೆಯಲ್ಪಡುವ ಈ ಬಗೆಯ ಸನ್ನಿವೇಶಗಳಲ್ಲಿ ಮಾನವ ಮನದ ಒಂದು ನಿರ್ದಿಷ್ಟ ಭಾಗವು ರಹಸ್ಯಮಯವಾದ ವ್ಯಾಪಾರ ಸಾಗಿಸುತ್ತದೆ ಎಂಬ ಸುಳುಹು ಸಿಕ್ಕುತ್ತದೆ. ಹೆಚ್ಚಿನ ಸಮಯವೆಲ್ಲಾ ಅದು ಸುಪ್ತವಾಗಿರುತ್ತದೆ, ಜಾಗ್ರತಪ್ರಜ್ಞೆ ಸಮಸ್ಯೆಯೊಂದರೊಂದಿಗೆ ಸೆಣಸಿ ಸೋತು, ಮತ್ತೆ ಮುನ್ನಡೆಯಲು ಅಸಮರ್ಥವಾದಾಗ ಅವಚೇತನ ಮನ ಜಾಗ್ರತವಾಗುತ್ತದೆ. ಪಳಗಿದ ವಿಚಾರಜೀವಿಗಳು ಕನಸಿಗರಾಗಲು ಕಲಿತು ಇಂಥ ಸಮಸ್ಯೆಯೊಂದನ್ನು ನೇರವಾಗಿ ಅವಚೇತನ ಮನಕ್ಕೆ ಒಪ್ಪಿಸಬಲ್ಲರು.

ಈ ಕ್ರಿಯೆಯನ್ನು ‘ಸುಪ್ತಪ್ರಜ್ಞೆಯ ಪ್ರಪತ್ತಿ’ ಎಂದು ಅರ್ಥರ್ ಕೆಸ್ಲರ್ ಕರೆದಿದ್ದಾನೆ. ಆತನ ಹೇಳಿಕೆಯಂತೆ, ವೈಜ್ಞಾನಿಕ ಕ್ರಾಂತಿಯ ಮುಂಚೆ ಕರ್ತೃತ್ವಶಾಲಿ ವ್ಯಕ್ತಿಗಳು ಇದರ ಪ್ರಯೋಜನವನ್ನು ಪದೇ ಪದೇ ಪಡೆಯುತ್ತಿದ್ದರು. ಆದರೆ, ವೈಜ್ಞಾನಿಕ ಕ್ರಾಂತಿಯ ಕಾಲದಲ್ಲಿ ವಿಜ್ಞಾನಿಗಳು ಜಾಗ್ರತಪ್ರಜ್ಞೆಯ ದೀರ್ಘಾಲೋಚನೆಯ ನಿರ್ಣಯಗಳ ಮೇಲೆ ಹೆಚ್ಚಿನ ಭರವಸೆ ಇಟ್ಟರು. ಅವಚೇತನ ಮನದ ಚಿಂತನ ಹಿನ್ನೆಲೆಗೆ ತಳ್ಳಲ್ಪಟ್ಟಿತು. ಜನರು ಜಾಗ್ರತ–ಪ್ರಜ್ಞಾಕ್ಷೇತ್ರದಾಚೆಯಿರುವ, ಅವಚೇತನದ ಪ್ರಾಯೋಗಿಕ ಶಕ್ತಿಯನ್ನು ಕ್ರಮೇಣ ಕಳೆದುಕೊಂಡರು.

ಆದರೆ ಅವರಲ್ಲಿ ಎಲ್ಲರೂ ಕ್ವಚಿತ್ತಾಗಿ ಪ್ರಯೋಗಿಸಲ್ಪಟ್ಟ ಈ ಮಾನಸಿಕ ಧೀಶಕ್ತಿಯ ಮಹತ್ವವನ್ನು ಮನಗಾಣದೆ ಇರಲಿಲ್ಲ. ಇದರ ದೃಷ್ಟಾಂತಗಳು ಮಹಾ ತತ್ವಜ್ಞಾನಿಗಳ, ಗಣಿತಜ್ಞರ ಬರಹಗಳಲ್ಲಿ ಹೇರಳವಾಗಿ ಹರಡಿಕೊಂಡಿವೆ. ಶ್ರೇಷ್ಠ

ಜರ್ಮನ್ ತತ್ವಜ್ಞಾನಿ ಕಾಂಟ್, "ನಮಗೆ ನಮ್ಮ ಬೌದ್ಧಿಕ ಚಿಚ್ಛಕ್ತಿ ಮತ್ತು ಸಂವೇದನಾ ಕ್ಷೇತ್ರದ ಪ್ರಜ್ಞೆಯಿರದಿದ್ದರೂ ನಿಸ್ಸಂಶಯವಾಗಿಯೂ ನಾವು ಅವನ್ನು ಹೊಂದಿದ್ದೇವೆ ಎಂದು ಊಹಿಸಬಹುದು. ಮಾನವನಲ್ಲಿ ಗುಪ್ತ ವಿಚಾರಗಳು ಅಗಣಿತವಾಗಿವೆ," ಎಂದು ಬರೆದಿದ್ದಾನೆ.

ಹಾಗೆಯೇ ಪ್ರಖ್ಯಾತ ತತ್ವಜ್ಞಾನಿ ಹಾಗೂ ಗಣಿತಜ್ಞ ಲೇಬನಿಝ್ ಹೇಳುತ್ತಾನೆ: "ನಮ್ಮ ಸ್ಪಷ್ಟ ಕಲ್ಪನೆಗಳು ಅವ್ಯಕ್ತ ಶರಧಿಯಿಂದ ಮೇಲಕ್ಕೆದ್ದ ದ್ವೀಪಗಳಂತಿವೆ." ಕವಿ ಗಯಟೆ ಕೂಡ, "ಮಾನವನು ಜಾಗ್ರತಪ್ರಜ್ಞಾಸ್ಥಿತಿಯಲ್ಲಿ ಬಹುಕಾಲ ವಿಘ್ನಗಳನ್ನು ಧಿಕ್ಕರಿಸಿ ಪ್ರಯತ್ನಿಸಲಾರ. ಅವನು ಮತ್ತೆ ಮರಳಿ ತನ್ನಷ್ಟಕ್ಕೆ ತಾನು ಸುಪ್ತ ಪ್ರಜ್ಞಾಸ್ಥಿತಿಯ ಆಶ್ರಮಕ್ಕೆ ಮರಳಲೇ ಬೇಕು. ಯಾಕೆಂದರೆ ಅವನ ಉಗಮ ಅಲ್ಲೇ ಇದೆ,"

ತರುವಾಯದಲ್ಲಿಯೂ ಅನೇಕ ಸುಪ್ರಸಿದ್ಧ ವಿಜ್ಞಾನಿಗಳು ಒಂದಿಲ್ಲ ಒಂದು ವೇಳೆ ಈ ಅವಚೇತನವನ್ನು ಆಶ್ರಯಿಸಿದ್ದಾರೆ. ಫ್ರೆಂಚ್ ವಿಜ್ಞಾನಿ ಫೆರ್ ಸಹ ವಿಜ್ಞಾನಿಗಳ ಕಾರ್ಯವಿಧಾನವನ್ನು ಅಭ್ಯಸಿಸಿ ಅವರಲ್ಲಿ ಶೇ೭೫ ರಷ್ಟು ಜನ ವಿಜ್ಞಾನಿಗಳು ತಮ್ಮ ಅತ್ಯಂತ ಮಹತ್ವದ ಸಂಶೋಧನೆಗಳಿಗಾಗಿ, ಮನಸ್ಸಿನಾಳದ ಸಂಸ್ತರಗಳಲ್ಲಿ ಸಾಗುವ ಈ ಗೂಢ ವಿಧಾನಕ್ಕೆ ಋಣಿಯಾಗಿದ್ದಾರೆ. ಎಂಬ ಅಚ್ಚರಿಯ ತೀರ್ಮಾನಕ್ಕೆ ಬಂದಿದ್ದಾನೆ.

ಡಾರ್ವಿನ್ನನಿಗೆ ಉತ್ಕ್ರಾಂತಿವಾದವನ್ನು ಕಲ್ಪಿಸಲು ಸಹಾಯವಾದುದು ಇದರ ಮಹೋನ್ನತ ಉದಾಹರಣೆ. ೧೮೩೭ ರಲ್ಲಿ ಡಾರ್ವಿನ್ 'ಬೀಗಲ್' ಹಡಗಿನಲ್ಲಿ ತನ್ನ ಸಮುದ್ರಯಾನ ಮುಗಿಸಿ ಮರಳುವಾಗ್ಗೆ 'ವಿಕಾಸವಾದ'ವೊಂದೇ ಪೃಥ್ವಿಯ ಮೇಲಿನ ಜೀವಿಗಳ ವಿಕಾಸವನ್ನು ವಿವರಿಸಬಲ್ಲದೆಂಬುದು ಅವನಿಗೆ ದೃಢವಾಗಿ ನಂಬಿಕೆಯಾಗಿತ್ತು. ಅವನು ಅದನ್ನು ಸಾಧಿಸಲು ತನ್ನ ಸಾಹಸಯಾನದಲ್ಲಿ ಬಹಳಷ್ಟು ಪ್ರಾಣಿಶಾಸ್ತ್ರ ಮತ್ತು ಭೂಗರ್ಭ ಶಾಸ್ತ್ರೀಯ ಪ್ರಮಾಣಗಳನ್ನು ಸಂಗ್ರಹಿಸಿದ್ದನು.

ಅವನು ಈ ವಾದದೊಡನೆ ಆಗಲೇ ಪ್ರಪಂಚದ ಮುಂದೆ ಪ್ರಕಟವಾಗಬಹುದಿತ್ತು. ಆದರೆ ಇನ್ನೂ ಅತಿ ಮಹತ್ವದ ಸೂತ್ರವೊಂದರ ನ್ಯೂನ್ಯತೆಯಿತ್ತು. ಅವನು ಉತ್ಕ್ರಾಂತಿ ಹೇಗೆ ನಡೆಯಿತು ಎಂಬುದನ್ನೇ ವಿವರಿಸಲು ಅಸಮರ್ಥನಾಗಿದ್ದ. ಅವನು ವಿವಿಧ ಪ್ರಮೇಯಗಳನ್ನು ಕಟ್ಟಿದ್ದ. ಆದರೆ ಆವಾವವೂ ಅನಿಂದ್ಯವಾಗಿರಲಿಲ್ಲ. ಈ ಅಂಧ ಮಾರ್ಗ ಕ್ರಮೇಣ ವರ್ಷವೊಂದಕ್ಕೂ ಮಿಕ್ಕಿ ಮುಂದುವರೆಯಿತು.

ಅನಂತರ ೧೮೫೮ರಲ್ಲಿ ಅವನಿಗೆ ಆಕಸ್ಮಾತ್ತಾಗಿ ಮಾಲ್ಥೂಸನ 'ಎನ್ ಎಸ್ಸೇ ಆನ್ ದಿ ಪ್ರಿನ್ಸಿಪಲ್ ಆಫ್ ಪಾಪ್ಯುಲೇಶನ್' ಎಂಬ ಕೃತಿ ಸಿಕ್ಕಿತು. ಅದರಲ್ಲಿ ಮಾಲ್ಥೂಸ್, "ಇಂಗ್ಲೆಂಡಿನ ಜನಸಂಖ್ಯೆ, ಅದು ಅವರನ್ನು ಪೋಷಿಸಲು ಇನ್ನೂ

ಬಹುಕಾಲ ಸಾಧ್ಯವಾಗದ ಪರಿಯಲ್ಲಿ ದ್ವಿಗುಣಿತಗೊಳ್ಳಬಹುದಾಗಿತ್ತು. ಆದರೆ ಅಲ್ಲಿ ಸತತವಾದ ಜೀವನದ ಹೋರಾಟವಿತ್ತು.," ಎಂದು ಬರೆದಿದ್ದ. ಈ ಅಂತಿಮ ವಾಕ್ಯವೇ ಆಕಸ್ಮಿಕವಾಗಿ ದೀರ್ಘಕಾಲದ ಗೂಢ ಸಮಸ್ಯೆಯ ಪರಿಹಾರಕ್ಕೆ ಎಡೆಮಾಡಿಕೊಟ್ಟಿತು. 'ಬಾಳ್ವೆಯ ಹೋರಾಟ'ವೇ ಉತ್ಕ್ರಾಂತಿಗೆ ಪ್ರೇರಣಾತ್ಮಕ ಬಲವಾಗಿತ್ತೆಂದು ಮಿಂಚಿನಂತೆ ಅವನಿಗೆ ಗೋಚರಿಸಿತು. ಈ ಗವನು ಪರಿಪೂರ್ಣ ಸಿದ್ಧಾಂತವನ್ನು ಮಂಡಿಸಬಲ್ಲವನಾದನು.

ಅವಚೇತನವೇ ಮೂಲವಿಚಾರವೊಂದಕ್ಕೆ ಅಂತಿಮ ರೂಪ ಕೊಡುವುದೆಂದು ಡಾರ್ವಿನ್ನನ ಅನುಭವ ಸಿದ್ಧಾಂತಪಡಿಸುತ್ತದೆ. ಡಾರ್ವಿನ್ನನಿಗೆ ಸಂಬಂಧಿಸಿದ್ದ ಈ ಉಪಕಥೆ ಕೂಡ ಅವಚೇತನದ ಪ್ರತಿಭೆಯ ಒಂದು ಅವಶ್ಯಕ ಸ್ವಭಾವವನ್ನು ಪ್ರತಿಪಾದಿಸುತ್ತದೆ. ಅವಚೇತನ ಕಾರ್ಯೋನ್ಮುಖವಾಗಲು ಪ್ರೇರೇಪಿಸುವುದು ದೈವವಲ್ಲ. ಜಾಗ್ರತ ಪ್ರಜ್ಞೆ ತನ್ನ ಸಾಮರ್ಥ್ಯದ ಸಂಪೂರ್ಣತೆಯಲ್ಲಿಯೂ ವಿಫಲತೆಯನ್ನು ಕಂಡಾಗ ಅವಚೇತನ ಮನವು ಕಾರ್ಯಪ್ರವೃತ್ತವಾಗುತ್ತದೆ.

ಅವಚೇತನ ಮನವು, ಕರ್ತೃತ್ವಶಕ್ತಿಯ ಸಾಧಕನಿಗೆ ಬೇರೊಂದು ವಿಧದಲ್ಲಿ ಸಹಾಯ ಸಲ್ಲಿಸಬಹುದು. ಉದಾಹರಣೆಗೆ ವಿಜ್ಞಾನಿಗಳು ಒಮ್ಮೊಮ್ಮೆ ಯಾವುದೇ ಹೊಸ ಸಿದ್ಧಾಂತಕ್ಕಾಗಿ ಪ್ರಾಯೋಗಿಕ ಪ್ರಮಾಣಗಳನ್ನು ಸಂಗ್ರಹಿಸುವ ಎಷ್ಟೋ ಮುಂಚೆ 'ನವಸತ್ಯ'ವೊಂದನ್ನು ತಿಳಿಯಲು ಸಮರ್ಥರಾಗುತ್ತಾರೆ. ದೈನಂದಿನ ಜೀವನದಲ್ಲಿ ನಾವದನ್ನು ಅಂತಃಸ್ಫೂರ್ತಿಯೆಂದು ಹೆಸರಿಸುತ್ತೇವೆ. ಮೇರಿ ಕ್ಯೂರಿಯ ಉದಾಹರಣೆ ನೋಡಿ. ಆ ವರೆಗೂ ಅಜ್ಞಾತವಾಗಿದ್ದ ರೇಡಿಯೋ ಪ್ರವೃತ್ತಿಯ ಮೂಲವಸ್ತುವೊಂದು ಅಸ್ತಿತ್ವದಲ್ಲಿದೆಯೆಂದು ಆಕೆ ನಿಜಕ್ಕೂ 'ರೇಡಿಯಮ್' ಅನ್ನು ಬೇರ್ಪಡಿಸುವ ಬಹಳ ಮುಂಚೆಯೇ ಅರಿತಿದ್ದಳು. ತನ್ನ ಪೂರ್ವ ಸಂಶೋಧನೆಗಳಲ್ಲಿ ಕ್ಯೂರಿ ಯಾವುದೇ ಅರಿತ ಮೂಲದಿಂದ ಬಾರದ ರೇಡಿಯೋ ಪ್ರವೃತ್ತಿಯ ಕೆಲ ಪದಾರ್ಥಾಂಶವನ್ನು ನಿರೀಕ್ಷಿಸುತ್ತಿದ್ದಳು. ಆಕೆಯ ಅಂತಃಸ್ಫೂರ್ತಿ ಆಕೆ ಸಂಪೂರ್ಣವಾಗಿ ರೇಡಿಯೋ ಪ್ರವೃತ್ತಿಯ ನವ ಮೂಲವೊಂದರ ಮೇಲೆ ಗುರಿ ಸಾಧಿಸಿದ್ದಾಳೆ ಎಂದು ಸಾಕ್ಷಿ ನುಡಿಯುತ್ತಿತ್ತು. ಮೇರಿಕ್ಯೂರಿಯ ಮಗಳಾದ ಈವಾ, ತನ್ನ ತಾಯಿಯ ಜೀವನ ಚರಿತ್ರೆಯಲ್ಲಿ ಈ ಬಲವಾದ ರೇಡಿಯೋ ಪ್ರವೃತ್ತಿಯ ವಸ್ತು ಪ್ರಥಮತಃ ಮೇರಿ ಮತ್ತು ಪಿಯರಿಯರ 'ಕಲ್ಪನೆ'ಯಲ್ಲಿ ಮಾತ್ರ ದೃಗ್ಗೋಚರವಾಗಿತ್ತು," ಎಂದು ಬರೆಯುತ್ತಾಳೆ.

ಹೀಗಿರುವಲ್ಲಿ ಉಳಿದ ವಿಜ್ಞಾನಿಗಳು ಮೇರಿಯ ಪ್ರಯೋಗಗಳಲ್ಲಿ ಕಂಡು

ಬಂದ 'ವಿವರಿಸಲಾಗದಂಥದು' ಪ್ರಾಯೋಗಿಕ ದೋಷದಿಂದ ಉಂಟಾದ ಭ್ರಮೆ ಎಂಬುದಾಗಿ ಸ್ಪಷ್ಟ ನಿರ್ಣಯ ಕೈಗೊಳ್ಳಲು ಮುಂದಾದರು. ಅದು ನಿಜವಾದ ವಸ್ತು ಅಲ್ಲವೆಂದವರು ನಿರ್ಧರಿಸಿದರು. ಆದರೆ ಮೇರಿ ತನ್ನ ಅಂತಃಸ್ಫೂರ್ತಿಯಲ್ಲಿ ಅಪಾರ ವಿಶ್ವಾಸವನ್ನಿರಿಸಿದ್ದಳು ಮತ್ತು ಕೊನೆಗೂ ಅದು ಸರಿಯೆಂದು ಸಾಧಿಸಲ್ಪಟ್ಟಿತು. ನಿಜಕ್ಕೂ ನವಮೂಲ ವಸ್ತುವೊಂದು ರೇಡಿಯೋ ಪ್ರವೃತ್ತಿಯ ಮೂಲವಾಗಿತ್ತು.

ಅವಚೇತನದ ಪ್ರೇರಣೆ ಬಾನಿನಿಂದ ಬರಲಾರದು. ವಿವೇಚಿಸಿ, ಕೊನೆಗೆ ಆಶಾತೀತವೆಂದು ತಿರಸ್ಕರಿಸಿದಂಥ ಕಠಿಣ ಸಮಸ್ಯೆಗಳನ್ನು ಅವಚೇತನವು ಸ್ವೀಕರಿಸುತ್ತದೆ. ಆದ್ದರಿಂದ ಯಾವುದೇ ಸಮಸ್ಯೆಗೆ ಲಕ್ಷ್ಯಪೂರ್ವಕ ವ್ಯಾಖ್ಯೆ ಕೊಡಲು ಎಲ್ಲಾ ಅವಶ್ಯಕ ಸಂಗತಿಗಳನ್ನು, ಅಂಕಿ-ಸಂಖ್ಯೆಗಳನ್ನು ಮತ್ತು ವಾದಗಳನ್ನು ಮೊದಲು ಸಂಗ್ರಹಿಸಿ ಮತ್ತು ಯಾವುದೇ ಅರಿತ ವಿಧಾನದಿಂದ ಅದನ್ನು ಬಗೆಹರಿಸಬಹುದೇ ಎಂದು ಯೋಚಿಸಿ. ಒಂದು ವೇಳೆ ಈ ಹೆಜ್ಜೆ ವಿಫಲವಾದರೆ, ಸಮಸ್ಯೆಯನ್ನು ಅದರಷ್ಟಕ್ಕೇ ಬಿಟ್ಟುಕೊಟ್ಟು ತತ್ಕಾಲಕ್ಕೆ ನಿರ್ಲಿಪ್ತರಾಗಿ, ಮತ್ತು ಜಾಗ್ರತ ಪ್ರಜ್ಞೆಗೆ ವಿಶ್ರಮಿಸಲು ಬಿಡಿರಿ. ಈ ವಿಶ್ರಾಂತಭಾವವನ್ನು ಮನಸ್ಸಿಗೆ ವಿಶೇಷ ಕಷ್ಟವೀಯದ ಚಲನಚಿತ್ರ ಅಥವಾ ವಿನೋದ ಪ್ರಧಾನವಾದ ಕೃತಿಯೊಂದರ ಓದಿನಿಂದ ಸಾಧಿಸಬಹುದು. ಆ ಮೇಲೆ ಪರಿಹಾರ ತನ್ನಷ್ಟಕ್ಕೇ ಆಕಸ್ಮಿಕವಾಗಿ ಮಿಂಚಿನಂತೆ ಗೋಚರಿಸಬಹುದು. ಇನ್ನೂ ಪರಿಹಾರ ದೊರೆಯದಿದ್ದರೆ ಅಷ್ಟುಕಾಲ ಆಳವಾಗಿ ವಿಚಾರಿಸುವ ಮತ್ತು ಅನಂತರ ವಿಶ್ರಮಿಸುವ ಚಕ್ರವನ್ನು ಪುನಾರಾವರ್ತಿಸಬೇಕು. ಇಂಥ ಕೆಲ ವಿಚಾರ ಚಕ್ರಗಳ ನಂತರ, ಅವಚೇತನ ಮನವು ಅವಿಕಾರವಾಗಿ ಉತ್ತರದೊಂದಿಗೆ ಪ್ರಕಟವಾಗಬಹುದು.

ಜಾಗ್ರತಪ್ರಜ್ಞೆ ಸೋಲನ್ನೊಪ್ಪಿ ತನ್ನ ಕಾರ್ಯ ಸ್ಥಗಿತಗೊಳಿಸಿದಾಗಲೂ ಅವಚೇತನ ಮನವು ಹೇಗೆ ಜಯಿಸುವುದು? ನಿಜಕ್ಕೂ ಇದನ್ನು ಯಾರೂ ಅರಿತಿಲ್ಲ. ಬಹುಶಃ ಮಾನವನ ಮನದಾಳದಲ್ಲಿ ಗತ ಅನುಭವಗಳ ಮತ್ತು ಜ್ಞಾನದ ಉಗ್ರಾಣವಿದೆ. ಬಹುಶಃ ಈ ಜ್ಞಾನ ಮತ್ತು ಅನುಭವಗಳ ಸಂಪತ್ತಿನಲ್ಲಿ, ಜಾಗ್ರತ ಪ್ರಜ್ಞೆಯನ್ನು ಪೀಡಿಸುವ ಸಮಸ್ಯೆಗಳಿಗೆ ಸುಳುಹು ಇದೆ.

ಸಾಭಾರ : ಮಿರರ್

ಅನು : ಸ್ಥಿತಪ್ರಜ್ಞ

* * * *

ಗಾಂಧಿ ಅರ್ಥೈಸಿದ ವರ್ಣಾಶ್ರಮಧರ್ಮ

–ಕೆ. ಸಂಪದ್ಗಿರಿರಾವ್

ಗಾಂಧೀಜಿಯವರು ಅಸ್ಪೃಶ್ಯತಾ ನಿವಾರಣೆಗಾಗಿ ಕೈಗೊಂಡ ಕೆಲಸ ಹಿಂದೂ ಸಮಾಜದಲ್ಲಿರುವ ಸಂಪ್ರದಾಯ ಪಾಲಕರ ಆಗ್ರಹಕ್ಕೆ ಗುರಿಯಾಯಿತು. ಇವರು ಗಾಂಧಿಯವರನ್ನು ಹಿಂದೂ ಧರ್ಮದ ಘಾತಕರೆಂದೂ ಭಾವಿಸಿದರು. ಅದರ ಪ್ರತಿಯಾಗಿ ಗಾಂಧಿಯವರು ತಮಗೆ ವರ್ಣಾಶ್ರಮ ಸಿದ್ಧಾಂತದಲ್ಲಿ ಪೂರ್ಣ ವಿಶ್ವಾಸವಿದೆಯೆಂದು ಹೇಳಿ ಜಾತಿ ನಿರ್ಮೂಲನಕ್ಕೆ ಕಂಕಣಬದ್ಧರಾಗಿದ್ದ ಸುಧಾರಕರನ್ನು ಚಕಿತಗೊಳಿಸಿದರು. ಕ್ರಾಂತಿಕಾರಿ ವಿಚಾರಗಳನ್ನು ಪ್ರಚಾರಮಾಡಿ ಆಚರಣೆಗೆ ತರುವ ಪ್ರಯತ್ನಗಳ ಜೊತೆಗೆ ಕೆಲವು ವಿಷಯಗಳಲ್ಲಿ ಗಾಂಧಿಯವರು ಪುರಾತನ ಸಿದ್ಧಾಂತಗಳಿಗೆ ಅಂಟಿಕೊಂಡಿದ್ದರು–ಇದೊಂದು ವೈಶಿಷ್ಟ್ಯ ಅವರದು. ನಮ್ಮ ಪ್ರಾಚೀನ ಸಂಸ್ಕೃತಿಯಲ್ಲಿ ಅವರಿಗೆ ಸಾರವತ್ತಾದ ಭಾಗವೆಂದು ತೋರಿದ ಅಂಶಗಳನ್ನು ರಕ್ಷಿಸುವ ಶ್ರದ್ಧೆಯನ್ನು ಅವರು ತಾಳಿದ್ದರು. ತಾನು ಸನಾತನಿ ಹಿಂದುವೆಂದೇ ಕರೆದುಕೊಳ್ಳುತ್ತಿದ್ದರು.

"ಹಿಂದು ಧರ್ಮಕ್ಕೆ 'ವರ್ಣಾಶ್ರಮ ಧರ್ಮ' ಎನ್ನುವುದು ಒಂದು ಪರ್ಯಾಯಪದ ಆದರೆ–ಅಸಮರ್ಪಕವಾದ ಪದ"(ಹರಿಜನ,೨೮–೬–೩೪) ಎಂದು ಅವರು ಬರೆದರು. ಅವರ ಅಭಿಪ್ರಾಯದಲ್ಲಿ ಹಿಂದೂ ಧರ್ಮವೂ ವರ್ಣಾಶ್ರಮ ಧರ್ಮವೂ ಏಕದೇಹ ನ್ಯಾಯದಂತೆ ಅವಿಭಾಜ್ಯ. ವರ್ಣವು ಸಾಮಾನ್ಯವಾಗಿ ಅನುವಂಶಿಕವಾದುದು–ಇದನ್ನು ಕರ್ತವ್ಯದ ದೃಷ್ಟಿಯಿಂದ ಸಮಾಜ ಹಿತಕ್ಕಾಗಿ ನಾವು ಪಾಲಿಸಬೇಕು. ಕೇವಲ ಧನಾರ್ಜನೆ ನಿಮಿತ್ತಕ್ಕಾಗಿ ಈ ಕರ್ತವ್ಯವನ್ನು ಲೋಪಮಾಡಿ ಇತರ ವೃತ್ತಿಗಳನ್ನು ಅವಲಂಬಿಸಲು ಆಸೆ ಪಡಬಾರದು ಎನ್ನುತ್ತಾರೆ ಗಾಂಧಿಯವರು.

ಈಗಿನ ಜಾತಿ ಉಪಜಾತಿಗಳು ವರ್ಣಾಶ್ರಮದ ತೀರ ಆಭಾಸಗಳು. ಭೋಜನ, ವಿವಾಹ–ಈ ಎರಡು ವಿಷಯಗಳಲ್ಲಿ ನಿಷೇಧವನ್ನು ವಿಧಿಸಿ ಈ ಉಪಜಾತಿಗಳು ತಮ್ಮ ವೈಶಿಷ್ಟ್ಯವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿವೆ. ಈ ನಿಷೇಧಗಳು ಚಾತುರ್ವರ್ಣ್ಯದ ನಿಜವಾದ ವ್ಯವಸ್ಥೆಯಲ್ಲಿ ಇರಬೇಕಾದ್ದಿಲ್ಲವೆಂಬುದು ಗಾಂಧಿಯವರ ಅಭಿಪ್ರಾಯ. ನಾನು ವಿವರಿಸಿದಂತೆ ವರ್ಣಾಶ್ರಮವು ಸಮಾಜದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಅವಶ್ಯಕತೆಗಳನ್ನು ತಣಿಸುತ್ತದೆ. ಈ ನಿಯಮ ಪಾಲನೆಯನ್ನು ಅಂಗೀಕರಿಸಿದ ಸಮಗ್ರ ಸಮಾಜವು ಸಾಮಾಜಿಕ ಅನರ್ಥಗಳನ್ನು ಇಲ್ಲದಂತೆಸಗುವುದರಿಂದ ಧಾರ್ಮಿಕ ಅವಶ್ಯಕತೆಗಳನ್ನು ಅದು ಪೂರೈಸುತ್ತದೆ. ಮತ್ತು ಸಂಪೂರ್ಣವಾಗಿ ಘಾತಕವಾದ ಆರ್ಥಿಕ ಸ್ಪರ್ಧೆಯನ್ನು ತಡೆಯುತ್ತದೆ.

ಸಮಾಜದ ಹಕ್ಕುಗಳನ್ನು ವಿವರಿಸುವುದಕ್ಕಿಂತಲೂ ಅದರ ಹೊಣೆಗಳನ್ನು ಇದು ನಿರ್ದೇಶಿಸುತ್ತದೆಯೆಂದು ತಿಳಿದುಕೊಂಡರೆ ಪೂರ್ಣಸರಿಸಮಾನವಾದ ಧನದ ಹಂಚಿಕೆಯಾಗುವುದೆಂದು ಹೇಳಲು ಬಾರದಿದ್ದರೂ ಶಕ್ಯವಿದ್ದಷ್ಟು ಉಚಿತವಾದ ರೀತಿಯಲ್ಲಿ ಹಣದ ಹಂಚಿಕೆಯ ಆಶ್ವಾಸನೆಯನ್ನೂ ನೀಡಬಲ್ಲದು,.... ಈ ನಿಯಮದಲ್ಲಿ ತನ್ನ ಮನಃಪ್ರವೃತ್ತಿಯ ವಿರುದ್ಧ ಅನುವಂಶಿಕವಾಗಿ ಬಂದ ಉದ್ಯೋಗವನ್ನೇ ಕೈಗೊಳ್ಳಬೇಕೆಂಬ ಒತ್ತಾಯದ ಪ್ರಶ್ನೆಯೇ ಇಲ್ಲ...ಜನರು ಈ ನಿಯಮದಲ್ಲಿರುವ ನ್ಯಾಯವನ್ನೂ ಧರ್ಮವನ್ನೂ ಆಚಾರತಃ ಒಪ್ಪಿಕೊಂಡು ಸ್ವಪ್ರೇರಣೆಯಿಂದ ಅದನ್ನು ನಡೆಸುತ್ತಿದ್ದರು. ಇಂದು ರಾಷ್ಟ್ರಗಳು ಈ ನಿಯಮವನ್ನು ಅರಿಯದೆ ಅಜ್ಞಾನದಲ್ಲಿರುವುದರಿಂದಲೂ ಅದನ್ನು ಉಲ್ಲಂಘಿಸುತ್ತಿರುವುದರಿಂದಲೂ ವಿವಿಧ ಕಷ್ಟಗಳನ್ನು ಅನುಭವಿಸುತ್ತಿವೆ. (ಹರಿಜನ,೪-೩-೧೯೩೩)

ಭಾರತದ ವೈಶಿಷ್ಟ್ಯವಾದ ಈ ವ್ಯವಸ್ಥೆ ಪ್ರಪಂಚಕ್ಕೆ ಅಮೌಲ್ಯವಾದ ಕೊಡುಗೆ ಎಂದು ಗಾಂಧೀಜಿಯವರು ಭಾವಿಸಿದರು.

ಆಧುನಿಕ ಸಮಾಜದಲ್ಲಿ ತೋರುವ ಅಪರಿಮಿತ ಸ್ಪರ್ಧೆಯನ್ನು ತಪ್ಪಿಸಿ ಮಾನವನ ನೈತಿಕ ಉತ್ಥಾನಕ್ಕೆ ಈ ಬಗೆಯ ವ್ಯವಸ್ಥೆ ದಾರಿಮಾಡಿಕೊಡುವುದು.

ನಿಜವಾದ ವರ್ಣವ್ಯವಸ್ಥೆಯಲ್ಲಿ ಮೇಲು-ಕೀಳೆಂಬ ಭಾವನೆಯಿರಲಾಗದೆಂಬುದನ್ನು ಗಾಂಧಿಯವರು ಒತ್ತಿಹೇಳಿದರು. ಸಮಾಜದ ಒಂದು ದೇಹದಲ್ಲಿರುವ ವಿವಿಧ ಅಂಗಗಳಂತೆ ಇವನ್ನು ಭಾವಿಸಿದರೆ ಶ್ರೇಷ್ಠ ಕನಿಷ್ಠವೆಂದು ಹೇಳಲು ಬರುವುದಿಲ್ಲ. ಶ್ರೇಷ್ಠ ಕನಿಷ್ಠವೆಂದು ಹೇಳಿದರೆ ಸಮಾಜವು ಉಳಿಯಲಾರದು.

ಹಿಂದಿನ ಸ್ಮೃತಿಕಾರರು ಹೆಂಗಸರಿಗೂ ನಿಮ್ನವರ್ಗದವರಿಗೂ ಸರಿಯಾದ ನ್ಯಾಯ ಮಾಡಲಿಲ್ಲವೆಂದೂ ಗಾಂಧೀಯವರು ಒಪ್ಪಿಕೊಂಡರು. ಕಾಲಾನುಕಾಲಕ್ಕೆ ಅನುಸರಿಸಿ ಈ ವಿಷಯಗಳಲ್ಲಿ ಬದಲಾವಣೆಗಳು ಆಗುತ್ತಿರಬೇಕು. ಮಾನವರ ಆತ್ಮ ಗೌರವಕ್ಕೂ ಪೂರ್ಣವಿಕಾಸಕ್ಕೂ ತಡೆಮಾಡುವ ಯಾವ ಸಂಪ್ರದಾಯವನ್ನೂ ಗಾಂಧೀಯವರು ಒಪ್ಪಲು ಸಿದ್ಧರಾಗಿರಲಿಲ್ಲ.

ಈಗಿನ ಬ್ರಾಹ್ಮಣರು ಬ್ರಾಹ್ಮಣ್ಯದ ನಿಜ ಪ್ರತಿನಿಧಿಗಳಲ್ಲವೆಂದು ಗಾಂಧಿಯವರು ವಿಷಾದಿಸಿದರು. ಆದರೆ ಬ್ರಾಹ್ಮಣ್ಯದ ಪದ್ಧತಿಯನ್ನು ಕೊಂಡಾಡಿದರು. "ಹಿಂದೂಧರ್ಮದಲ್ಲಿಯಲ್ಲದೆ ಬೇರೆ ಯಾವ ಧರ್ಮದಲ್ಲಿಯೂ ದೇವರ(ಆಧ್ಯಾತ್ಮ) ಜ್ಞಾನಾರ್ಜನೆಗೆ ತಲತಲಾಂತರವಾಗಿ ಒಂದು ಗುಂಪನ್ನು ಏರ್ಪಾಡು ಮಾಡಿ ಅವರು ತಮ್ಮ ಸ್ವಂತ ಇಚ್ಛೆಯಿಂದಲೇ ಬಡವರಾಗಿರುವುದನ್ನು ನನಗೆ ತಿಳಿದ ಮಟ್ಟಿಗೆ ನಾನು ಕಾಣೆ. ತಾವೇ ವಿಧಿಸಿಕೊಂಡ ಉಚ್ಚಧ್ಯೇಯಗಳನ್ನು ಅವರು ಪಾಲಿಸಲಿಲ್ಲವೆನ್ನುವುದು ಅವರ ವಿಶಿಷ್ಟವಾದ ತಪ್ಪೇನೂ ಅಲ್ಲ.... ಆದ್ದರಿಂದಲೇ ಪವಿತ್ರಗ್ರಂಥಗಳಲ್ಲಿಯೂ ಸಹ ಕುಲಷಿತ ವಿಚಾರಗಳು ನುಸುಳಿಕೊಂಡವು. ನಿಸ್ವಾರ್ಥಪರವಾದ ನಿಯಮಗಳ ಜೊತೆಯಲ್ಲಿ, ತಮ್ಮ ಜಾತಿಗೆ

ಅನುಕೂಲವಾಗುವಂತಹ ಸ್ವಾರ್ಥದ ನಿಯಮಗಳು ಇವುಗಳಲ್ಲಿ ಸೇರಿಕೊಂಡಿವೆ. ಆದರೂ ಇವುಗಳನ್ನು ಎದುರಿಸಿದವರೂ ಬ್ರಾಹ್ಮಣರೇ. ಕಾಲಕಾಲಕ್ಕೆ ಸಮಾಜದಲ್ಲಿ ತಲೆಹಾಕಿದ ದೋಷಗಳನ್ನೂ ತೊಡೆದು ಹಾಕಲು ಪ್ರಯತ್ನಿಸಿದವರೂ ಅವರೇ. ಬ್ರಾಹ್ಮಣ್ಯದ ವಿಷಯದಲ್ಲಿ ನನಗೆ ಅತ್ಯಂತ ಪೂಜ್ಯ ಭಾವವಿದೆ. ಅಸ್ಪೃಶ್ಯತಾ ನಿವಾರಣೆಗಾಗಿ ಕೆಲಸಮಾಡುತ್ತಿರುವರೆಂದು ನನ್ನ ಭಾವನೆ.... ಬ್ರಾಹ್ಮಣ್ಯ ಅಧೋಗತಿಗಿಳಿದಾಗ ಅವರೊಡನೆ ಇತರ ವರ್ಣದ ಹಿಂದುಗಳೂ ಬಿದ್ದರು. ಬ್ರಾಹ್ಮಣ್ಯವು ಪುನರುಜ್ಜೀವನಗೊಳ್ಳದಿದ್ದರೆ ಹಿಂದೂ ಧರ್ಮ ಉಳಿಯಲಾರದೆಂಬುದುದರಲ್ಲಿ ನನಗೆ ಲೇಶಮಾತ್ರವೂ ಸಂದೇಹವಿಲ್ಲ....ಈಗಿನ ವರ್ಣಗಳು ಕೇವಲ ಹೆಸರುಗಳನ್ನು ಮಾತ್ರ ತಾಳಿವೆ. ಪೂರ್ಣವಾಗಿ ವರ್ಣಸಂಕರವಾಗಿಬಿಟ್ಟಿದೆ." (ಹರಿಜನ, ೨೫-೩-೩೩).

ವರ್ಣದ ವ್ಯವಸ್ಥೆಯೇ ಹೀಗಾದ ಮೇಲೆ ಆಶ್ರಮವ್ಯವಸ್ಥೆ "ಸದ್ಯಕ್ಕೆ ಮಡಿಯಲ್ಲಿಯೂ ಇಲ್ಲ"ವೆಂದು ಗಾಂಧಿಯವರು ಬಲ್ಲರು. "ಬರೀ ಪಶು ಜೀವನವನ್ನು ನಡೆಸುತ್ತಿರುವವರು ಈ ಆಶ್ರಮ ನಿಯಮಪಾಲಕರಲ್ಲ. ಇಂದಿನ ಗೃಹಸ್ಥರ ಜೀವನವು ವಿಲಾಸಜೀವನವಾಗಿದೆ. ಈ ನಾಲ್ಕು ಆಶ್ರಮಗಳು ಬೆಳವಣಿಗೆಯ ಏಣಿಯಂತಿರುವುದರಿಂದ ಬ್ರಹ್ಮಚರ್ಯ ಗೃಹಸ್ಥಾಶ್ರಮಗಳ ಯೋಗ್ಯಪರಿಪಾಲನೆಯಿಲ್ಲದೆ ವಾನಪ್ರಸ್ಥ ಸನ್ಯಾಸಾಶ್ರಮಗಳಿಗೆ ನಡೆದುಹೋಗಲು ಆಗಲಾರದು. ಆದುದರಿಂದ ಆಶ್ರಮ ನಿಯಮವೂ ಇಂದು ಅಳಿದುಹೋಗಿದೆ." (ಹರಿಜನ, ೨೮-೯-೩೪).

ಒಟ್ಟಿನ ಮೇಲೆ ಗಾಂಧಿಯವರ ಈ ಅಭಿಪ್ರಾಯಗಳು ಆರ್ಷೇಯ ಹಿಂದೂ ಸಂಸ್ಕೃತಿಗೆ ಅನುಗುಣವಾಗಿವೆ. ವರ್ಣಗಳಲ್ಲಿ ಪರಸ್ಪರ ಸೌಹಾರ್ದ ಸಹಕಾರ ಮನೋಧರ್ಮವನ್ನೇ ನಮ್ಮ ಪುರಾಣೇತಿಹಾಸಗಳಲ್ಲಿ ನಾವು ಕಾಣುತ್ತೇವೆ. ನಮ್ಮ ರಾಜಮಹಾರಾಜರ ಬಿರುದುಗಳಲ್ಲಿ ತಮ್ಮ ದೇಶದಲ್ಲಿ ವರ್ಣಾಶ್ರಮ ಧರ್ಮವನ್ನು ರಕ್ಷಿಸಿದರೆಂಬ ಕೀರ್ತಿ ದ್ಯೋತಕವಾಗುತ್ತದೆ. ತಮ್ಮ ಸ್ವಧರ್ಮವನ್ನು ಚೆನ್ನಾಗಿ ಆಚರಿಸುವುದರಲ್ಲಿ ಎಲ್ಲರೂ ಹೆಮ್ಮೆತಾಳುತ್ತಿದ್ದರು, ದಕ್ಷರಾಗಿದ್ದರು, ತೃಪ್ತರಾಗಿದ್ದರು. ಒಟ್ಟು ಸಮಾಜದ ಹಿತದೃಷ್ಟಿ ಅವರಲ್ಲಿತ್ತು.

"ಈ ವರ್ಣವ್ಯವಸ್ಥೆಯನ್ನು ಎತ್ತಿಹಿಡಿಯುವುದು ಬರಿ ಕನಸೆಂದು ಕೆಲವರು ಭಾವಿಸಬಹುದು. ಅದನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ ಕೇವಲ ಮೂರ್ಖತನವೆಂದು ತೋರಬಹುದು. ಅದು ಹೇಗೇ ಇರಲಿ. ಇದೇ ನಿಜವಾದ ಸಮತಾವಾದ ಎಂಬುದು ನನ್ನ ದೃಢವಾದ ನಂಬಿಕೆ."

(ಹರಿಜನ,೨೮-೯-೩೪) ಎಂದು ಗಾಂಧಿ ಬರೆದರು.

ಈ ವಿಷಯ ನಮ್ಮ ಪ್ರತಿಭಾವಂತರ ಅಧ್ಯಯನಕ್ಕೆ ಯೋಗ್ಯವಾದ ವಿಷಯ.

* * * *

ಇಸ್ಲಾಮಿಯರು ವಂದೇ ಮಾತರಂ ವಿರೋಧಿಸಬೇಕಿಲ್ಲ

–ಮುಜಫರ್ ಹುಸೇನ್

ವಂದೇ ಮಾತರಂ...ಗೆ ರಾಷ್ಟ್ರಗೀತೆ ರೂಪದಲ್ಲಿ ಮಾನ್ಯತೆ ದೊರೆತು ನೂರು ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ೭ನಡೆಯುತ್ತಿರುವ ಸಮಾರೋಪ ಸಮಾರಂಭದ ನಿಮಿತ್ತ ಸೆಪ್ಟೆಂಬರ್ ೭ರಂದು ದೇಶದ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಸಾಮೂಹಿಕವಾಗಿ ವಂದೇ ಮಾತರಂ ಹಾಡುವ ಕುರಿತು ಕೇಂದ್ರ ಸರಕಾರ ಹೊರಡಿಸಿರುವ ಆದೇಶದ ವಿರುದ್ಧ ಕೆಲವು ಪ್ರತ್ಯೇಕತಾವಾದಿ ಮುಸ್ಲಿಮರು ವಿವಾದ ಸೃಷ್ಟಿಸಿದ್ದಾರೆ. ಈ ಗೀತೆ ಇಸ್ಲಾಂ ವಿರೋಧಿ ಎಂದು ಇವರು ಹೇಳುತ್ತಿದ್ದಾರೆ.

ಪ್ರತ್ಯೇಕತಾವಾದಿಗಳ ಗುರಿ ೧೯೦೫ರಲ್ಲಿ ಬೇರೆ ಇತ್ತು. ಮತ್ತು ಈಗ ಸಹ ಬೇರೆ ಇದೆ ಎಂದು ಕಾಣುತ್ತಿದೆ. ರಾಷ್ಟ್ರೀಯ ಮುಖ್ಯವಾಹಿನಿಯ ವಿರುದ್ಧ ತಮ್ಮ ಯೋಚನೆಗೆ ಮಾನ್ಯತೆ ದೊರೆಕಿಸಿಕೊಡಬೇಕು ಎಂಬುದಷ್ಟೇ ಇವರ ಉದ್ದೇಶವಿದ್ದಂತಿದೆ. ಹೆಸರೇನೋ ಇಸ್ಲಾಂನದ್ದಾಗಿದೆ. ಆದರೆ ಕೆಲಸವೆಲ್ಲವೂ ರಾಜಕೀಯ ಮತ್ತು ಕುಟಿಲ ನೀತಿಯದ್ದಾಗಿದೆ. ಸ್ವಾತಂತ್ರ್ಯಕ್ಕೆ ಮೊದಲು ಹಾಗೂ ನಂತರ ಇಸ್ಲಾಂ ಹೆಸರಿನಲ್ಲಿ ಸಾಕಷ್ಟು ಫತ್ವಾಗಳನ್ನು ಹೊರಡಿಸಲಾಗಿದೆ. ಈ ಪೈಕಿ ವಂದೇ ಮಾತರಂ ವಿರೋಧ ಸಹ ಇವುಗಳ ಮುಖ್ಯ ಉದ್ದೇಶಗಳ ಪೈಕಿ ಒಂದಾಗಿತ್ತು. ವಂದೇ ಮಾತರಂ ವಿರೋಧಿಗಳು ಎಬ್ಬಿಸಿರುವ ಈ ಹುಯಿಲಿನಲ್ಲಿ ಎಷ್ಟರ ಮಟ್ಟಿಗೆ ತಥ್ಯವಿದೆ ಎಂಬುದನ್ನು ಅರಿಯಲು ಇದನ್ನು ಇಸ್ಲಾಂ ದೃಷ್ಟಿಕೋನದಿಂದ ಪರಿಶೀಲಿಸುವುದು ಅನಿವಾರ್ಯ ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ.

ಹಾಗಿಲ್ಲ ಎನ್ನುವುದಾದರೆ ಇಂತಹ ಶಕ್ತಿಗಳ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ಭಯೋತ್ಪಾದನೆಯ ಶಕ್ತಿಯನ್ನು ಹೆಚ್ಚಿಸುವ ಇಂತಹ ಚರ್ಯೆ ಇಡೀ ರಾಷ್ಟ್ರಕ್ಕೆ ಅಪಾಯಕಾರಿ. ಈ ಕುರಿತು ಆಳವಾಗಿ ವಿಚಾರ ಮಾಡುವುದು ಅಗತ್ಯ.

ವಂದೇ ಮಾತರಂನ ಪ್ರತಿ ಸಾಲೂ ಭಾರತಮಾತೆಯ ಗುಣಗಾನ ಮಾಡುತ್ತದೆ. ಇದು ಕೇವಲ ವಸುಂಧರೆಯ ವರ್ಣನೆಗೆ ಮಾತ್ರ ಸೀಮಿತವಾಗಿಲ್ಲ. ಆದರೆ ಕವಿ ಜೀವಂತ ದೇವತೆಯ ಪ್ರತಿರೂಪ ಎಂಬಂತೆ ಭಾರತವನ್ನು ವರ್ಣಿಸುತ್ತಿದ್ದಾನೆ. ಅದರ ಶಕ್ತಿ ಏನು ಮತ್ತು ಶತ್ರುಗಳನ್ನು ಸೆದೆಬಡಿಯುವ ಅದರ

ತಾಕತ್ತೇನು ಎಂಬುದರ ರೋಚಕ ವಿವರಣೆ ಇಲ್ಲಿದೆ. ಒಂದೇ ಮಾತರಂ ಕೇವಲ ಹಾಡಲ್ಲ. ಭಾರತದ ನೈಜತೆಯನ್ನು ಪ್ರತಿಬಿಂಬಿಸುವ ಒಂದು ದಾಖಲೆ. ಭಾರತವನ್ನು ಹರಿಯಬೇಕಾದಲ್ಲಿ ನಿಮ್ಮ ತಾಯಿಯನ್ನು ಹರಿಯಿರಿ ಎಂದು ಬಂಕಿಮ ಚಂದ್ರರು ಆಹ್ವಾನ ನೀಡುತ್ತಿದ್ದಾರೆ.

ಇದರ ಸಂಪೂರ್ಣ ಉದ್ದೇಶ, ಆಕೆಯ ಪುತ್ರ ಪುತ್ರಿಯರಲ್ಲಿ ವಿಶ್ವಾಸ ಮೂಡಿಸುವುದಾಗಿದೆ. ದೇಶದ ಶತ್ರುಗಳಿಗೆ ತಾವು ಒಂದು ನಿಗೂಢ ಆಧ್ಯಾತ್ಮಿಕ ಶಕ್ತಿಯನ್ನು ಎದುರಿಸುತ್ತಿದ್ದೇವೆ ಎಂಬ ಅನುಭವ ಮೂಡಿಸುತ್ತದೆ. ತಮ್ಮ ದೇಶದ ನೆಲವನ್ನು ಸ್ವತಂತ್ರಗೊಳಿಸುವುದು ಅಂತಿಮವಾಗಿ ಬಂಕಿಮರ ಉದ್ದೇಶವಾಗಿತ್ತು. ಹೀಗಾಗಿ ದೇಶಕ್ಕಾಗಿ ಸರ್ವಸ್ವ ಅರ್ಪಿಸುವುದು ಇಲ್ಲಿ ಉಸಿರಾಡುವ ಎಲ್ಲರ ಧರ್ಮವಾಗಿದೆ.

ಭಾತರದಲ್ಲಿ ಒಂದೇ ಧರ್ಮ, ಜಾತಿ, ನಂಬಿಕೆಯ ವ್ಯಕ್ತಿಗಳಿಲ್ಲ. ಹಾಗಾಗಿ ದೇಶವನ್ನು ಮಾತೆಯಂತೆ ಪೂಜಿಸುವುದು ಹೇಗೆ ಎಂಬ ಪ್ರಶ್ನೆಯನ್ನು ಕೇಳಬಹುದು. ನಿರೀಶ್ವರ ವಾದಿಗಳು ಇದು ನಮ್ಮ ನಂಬಿಕೆ ಮತ್ತು ವಿಚಾರಧಾರೆಗೆ ವಿರುದ್ಧವಾಗಿದೆ ಎಂದು ಹೇಳಬಹುದು. ಆದರೆ ನಿರ್ಗುಣ, ನಿರಾಕಾರ ಭಗವಂತನಲ್ಲಿ ನಂಬಿಕೆ ಇಟ್ಟಿರುವವರು ಸಹ ಆತ ಅಪಾರಶಕ್ತಿಯ ಒಡೆಯನಾಗಿದ್ದಾನೆ ಎಂದು ನಂಬುತ್ತಾರೆ. ಯಾರದೆ ಗುಣ ಅಥವಾ ಶಕ್ತಿಗೆ ಮನ್ನಣೆ ನೀಡುವುದು ಅಥವಾ ಅದರ ಅನುಭವ ಆಗುವುದು ಎಂದರೆ ನಿರೀಶ್ವರವಾದಿ ಸಿದ್ಧಾಂತವನ್ನು ಅಲ್ಲಗೆಳೆಯುವುದು ಎಂದಲ್ಲ.

ವಂದೇ ಮಾತರಂ ಕುರಿತು ಎಲ್ಲರಿಗಿಂತ ಹೆಚ್ಚು ವಿರೋಧ ಬೆರಳೆಣಿಕೆಯ ಮುಸ್ಲಿಂ ಬಾಂಧವರಿಗೆ ಮಾತ್ರ ಇದೆ. ಇಲ್ಲಿನ ವರ್ಣನೆ ಯಾವುದೋ ದೇವಿಯ ಸಾಕ್ಷಾತ್ ವರ್ಣನೆಯಂತಿದೆ ಮತ್ತು ಇಲ್ಲಿ ಉಪಯೋಗಿಸಿರುವ ಅಲಂಕಾರಗಳು ಆಕೆಯ ಪೂಜೆಯೇ ಆಗಿದೆಯಲ್ಲವೆ ಎಂದು ಅವರು ಪ್ರಶ್ನಿಸಬಹುದು. ಈ ವಾದವನ್ನು ಆರಂಭಿಸಿದರೆ ಒಂದೇ ಮಾತರಂ ಇಸ್ಲಾಂನ ಸಿದ್ಧಾಂತಗಳಿಗೆ ಪೂರಕವಾಗಿಯೇ ಇದೆ ಎನ್ನಬಹುದು. ಇಸ್ಲಾಂನಲ್ಲಿ ತಾಯಿಯನ್ನು ಪೂಜ್ಯೆ ಎಂದಿಲ್ಲವೇ? ಪೈಗಂಬರ್ ಮಹಮದ್ ಸಾಹೇಬರ ನುಡಿಯಲ್ಲಿ ತಾಯಿಯ ಕಾಲಿನಡಿ ಸ್ವರ್ಗವಿದೆ ಎಂಬ ಮಾತಿದೆ. ಇಸ್ಲಾಂ ಮೂರ್ತಿ ಪೂಜೆಗೆ ವಿರುದ್ಧ ಎಂದಾದರೆ ತಾಯಿ ಮತ್ತು ಅವರ ಕಾಲಿನ ಕಲ್ಪನೆ ಚಿತ್ರವೊಂದನ್ನು ನಮ್ಮ ಕಣ್ಣಿನಮುಂದೆ ತರುವುದಿಲ್ಲವೇ? ಸ್ವಂತ ತಾಯಿಗಾದರೂ ಶರೀರ ಇದೆ. ಆದರೆ ವಂದೇ ಮಾತರಂನಲ್ಲಿ ವರ್ಣಿಸಿರುವ ತಾಯಿಗೆ ಯಾವುದೇ ಶರೀರವಾಗಲಿ, ಬಣ್ಣ ಅಥವಾ ರೂಪವಾಗಲಿ ಇಲ್ಲ. ಹೀಗಿರುವಾಗ ಇದನ್ನು ದೇವತೆ ರೂಪದಲ್ಲಿ

ಪೂಜಿಸುವ ಪ್ರಶ್ನೆ ಎಲ್ಲಿ ಉದ್ಭವಿಸುತ್ತದೆ.? ಇಲ್ಲಿ ಕೇವಲ ಅಲಂಕಾರ ಮತ್ತು ವಿಶೇಷಣಗಳಿವೆ. ಇದೆ ಕಾರಣಕ್ಕಾಗಿ ಅದಕ್ಕೆ ಆಧಾರಲಭಿಸಿದೆ. ಈ ಆಧಾರವನ್ನು ಪೂಜನೀಯ ಶಬ್ದಗಳಲ್ಲಿ ಅಭಿವ್ಯಕ್ತಗೊಳಿಸಿದರೆ ಅದು ಮೂರ್ತಿ ಪೂಜೆಗೆ ಸಮವೇ?

ಭಾರತದಲ್ಲಿ ಮೊಘಲರ ಆಡಳಿತ ಇದ್ದಾಗ ಬಾದಶಹರನ್ನು 'ಜಿಲ್ಲೆ ಇಲಾಹಿ' ಎಂದು ಕರೆಯಲಾಗುತ್ತಿತ್ತು. (ಉದಾ: ಮೊಗಲ್ ಎ ಅಜಂ ಚಿತ್ರ) ಭಗವಂತನ ದಿವ್ಯ ಪ್ರಕಾಶ ಎಂಬುದು ಇದರರ್ಥ. ಈ ಪದ, ಪ್ರತಿಮೆಯೊಂದರ ಪ್ರಶಂಸೆಯನ್ನು ಹೇಳುವಂತಿಲ್ಲವೆ? ಇಲ್ಲಿ ಸಾಕ್ಷಾತ್ ಮೂಳೆ-ಮಾಂಸದಿಂದ ನಿರ್ಮಾಣಗೊಂಡ ಮನುಷ್ಯನಿಗಾಗಿ ಈ ಪದವನ್ನು ಉಪಯೋಗಿಸಲಾಗಿದೆ. ಮತ್ತೊಂದು ಅರ್ಥದಲ್ಲಿ ಹೇಳಬೇಕೆಂದರೆ ಈ ಪದದ ಮೂಲಕ ನೀವು ಒಂದು ಕಲ್ಲು ಅಥವಾ ದೇಶವನ್ನಲ್ಲ ಆದರೆ ಮನುಷ್ಯನೊಬ್ಬನನ್ನು ದೇವರೆಂದು ಮಾನ್ಯ ಮಾಡುತ್ತಿರುವಿರಿ ಅಲ್ಲವೇ? ಈ ತರ್ಕದ ಹಿನ್ನೆಲೆಯಲ್ಲಿ ನೋಡಿದರೆ ಇಸ್ಲಾಂ ಬಂಧುಗಳಿಗೆ ವಂದೇ ಮಾತರಂ ಪದಕ್ಕಿಂತ 'ಜಿಲ್ಲೆ ಇಲಾಹಿ'ಹೆಚ್ಚು ಆಕ್ಷೇಪಾರ್ಹ ಆಗಬೇಕಲ್ಲವೇ? ಒಂದೊಮ್ಮೆ ಇದನ್ನು ವಿಶೇಷಣ ಎಂದು ಅವರು ಹೇಳುವುದಾದರೆ ಭಾರತದ ವರ್ಣನೆಯ ವಿಶೇಷಣಗಳ ಬಗ್ಗೆ ಅವರಿಗೆ ಯಾವುದೇ ಹಿಂಜರಿಕೆ ಇರಬಾರದು ತಾನೇ? ವ್ಯಕ್ತಿಯ ಮುಖದಲ್ಲಿ ದೈವತ್ವದ ಪ್ರಕಾಶ ಇರಬಹುದಾದರೆ, ಶತ್ರುಗಳ ಸಂಹಾರ ಮಾಡುವ ಸಾಮರ್ಥ್ಯ ಹೊಂದಿರುವ ಮಾತೆಯನ್ನು ಸಹಸ್ರ ಬಾಹುಗಳನ್ನು ಹೊಂದಿರುವಳು ಎಂದು ಪ್ರಶಂಸೆ ಮಾಡಬಹುದು ತಾನೇ?

ಇಸ್ಲಾಂ ತನ್ನ ಧ್ವಜದಲ್ಲಿ ಚಂದ್ರ ಮತ್ತು ತಾರೆಗೆ ಹೆಚ್ಚು ಪ್ರಾಧಾನ್ಯತೆ ನೀಡುತ್ತದೆ. ಈ ಧ್ವಜಕ್ಕೆ ವಂದನೆ ಸಲ್ಲಿಸಲಾಗುತ್ತದೆ. ಅದಕ್ಕೆ ರಾಷ್ಟ್ರೀಯ ಗೌರವ ನೀಡಲಾಗುತ್ತದೆ. ಧ್ವಜಕ್ಕೆ ಅಪಮಾನ ಮಾಡಿದವರನ್ನು ಶಿಕ್ಷಿಸಲಾಗುತ್ತದೆ. ಹಸಿರು ಬಣ್ಣ ಮತ್ತು ಚಂದ್ರ ತಾರೆಯರು ಈ ಬ್ರಹ್ಮಾಂಡದ ಅಂಗತಾನೇ? ಧ್ವಜಕ್ಕೆ ಪ್ರಣಾಮ ಸಲ್ಲುತ್ತದೆಯಾದರೆ ಭೂತಾಯಿಗೆ ಯಾಕಾಗಬಾರದು? ಆಕಾಶದ ವಸ್ತುಗಳು ವಂದನೆಗೆ ಅರ್ಹ ಎಂದಾದಲ್ಲಿ ಭೂಮಿಯ ಮೇಲಿನ ಇತರ ವಸ್ತುಗಳು ಪೂಜನೀಯ ಎಂದು ಒಪ್ಪಲು ಹಿಂಜರಿಕೆ ಏಕೆ? ಭಾರತೀಯ ಸಂದರ್ಭದಲ್ಲಿ ಭಕ್ತಿ ಪ್ರದರ್ಶನವೆಂದರೆ ಪೂಜೆ ಎಂದಾಗುತ್ತದೆ. ಪೂಜೆ (ಇಬಾದತ್) ಪ್ರಾರ್ಥನೆಯ ಸಮಾನಾರ್ಥಕ ಪದವಾಗಿದ್ದು ಇದನ್ನು ಒಪ್ಪಲೇಬೇಕಾಗುತ್ತದೆ. ಬಂಗಾಳಿ ಭಾಷೆಯ ಅನೇಕ ಮುಸ್ಲಿಂ ಕವಿ ಹಾಗೂ ಸಾಹಿತಿಗಳು ಮಾನವನ ವಿಷಯದಲ್ಲಿ ವಂದನಾ ಎಂಬ ಪದವನ್ನು ಬಳಸಿದ್ದಾರೆ. ಯಾವೊಬ್ಬ ಬಂಗಾಳಿ ಮುಸ್ಲಿಂಗೂ ವಂದನಾ ಪದ ಎಂದರೆ ಅಲರ್ಜಿ ಇಲ್ಲ. ಆದರೆ ಅದನ್ನು ಅರಬ್ಬಿ ಮಾಧ್ಯಮದ ಮೂಲಕ

ಪ್ರಯೋಗಿಸಿದರೆ ಖಂಡಿತಾ ಮುಸಲ್ಮಾನರು ಆಕ್ಷೇಪಣೆ ಎತ್ತುತ್ತಾರೆ. ಏಕೆಂದರೆ ಸಮಯ, ಕಾಲ ಮತ್ತು ದೇಶಾನುಸಾರ ಪ್ರತಿ ಸ್ಥಳದಲ್ಲೂ ತಮ್ಮದೇ ಆದ ಪದಗಳಿರುತ್ತವೆ. ಮತ್ತು ಅದನ್ನು ತಮ್ಮದೇ ಆದ ರೀತಿಯಲ್ಲಿ ಬಳಸಲಾಗುತ್ತದೆ.

ಪ್ರಸಿದ್ಧ ಬಂಗಾಳಿ ವಿದ್ವಾನ್ ಮೌಲಾನಾ ಅಕ್ರಂ ಖಾನ್ ಸಾಹೇಬರ ಮುಖ್ಯ ಕೃತಿ 'ಮೊಸ್ತಪಾಚರಿತ'ದಲ್ಲಿ ಪುಟ ೧೫೦೫ ರಲ್ಲಿ ಅರಬ್ ದೇಶದ ಭೌಗೋಳಿಕ ವಿವರಣೆ ಇದ್ದು ಅದರಲ್ಲಿ ಅವರು ಹೀಗೆ ಬರೆಯುತ್ತಾರೆ. 'ಧರಿಯಾಚೆ ವಕ್ಷೋ ಮಾ ಗೊ, ಕಾರ್ ಪದಲೇಖಾ, ಹೇ ಅರಬ್ ಮಾನವೇರ್ ಆದಿ ಮಾತೃಭೂಮಿ.... ಅಂದರೆ ಕವಿ ಇಲ್ಲಿ ಅರಬ್ ದೇಶವನ್ನು ತಾಯಿ ಎಂದು ಸಂಬೋಧಿಸಿದ್ದಾರೆ.

ದೇಶವನ್ನು ನಾವು ತಾಯಿ ಎಂದರೆ ಅದನ್ನು ರೂಪಕ ಅರ್ಥದಲ್ಲಿ ಹೇಳುತ್ತೇವೆ. ದೇಶವನ್ನು ತಾಯಿಯ ರೂಪದಲ್ಲಿ ಸಂಬೋಧಿಸುವುದರ ಮೂಲ ಉದ್ದೇಶ ಇದೇ ಆಗಿದೆ. ಇಲ್ಲಿ ನಾವು ದೇಶವನ್ನು ಖುದಾ(ದೇವರು) ಎಂದು ಹೇಳುತ್ತಿಲ್ಲ. ನಾವು ತಾಯಿಯನ್ನು ತಾಯಿ ಎಂದು ಕರೆಯುವಲ್ಲಿ ಯಾವುದೇ ದೋಷ ಇಲ್ಲ ಎಂದಾದರೆ ದೇಶವನ್ನು ರೂಪಕ ಭಾವದಲ್ಲಿ ತಾಯಿ ಎಂದು ಸಂಬೋಧಿಸುವಲ್ಲಿ ಸಹ ಯಾವುದೇ ದೋಷ ಇರಲು ಸಾಧ್ಯವಿಲ್ಲ.

ದೇಶಭಕ್ತಿ, ದೇಶ-ಪೂಜೆ, ದೇಶ ವಂದನೆ, ದೇಶ-ಮಾತೃಕೆ, ಒಂದೇ ಪ್ರಕಾರದ ವಿಭಿನ್ನ ಪದಗಳಾಗಿದ್ದು ಇಸ್ಲಾಂನ ದೃಷ್ಟಿಯಿಂದ ಸಂಪೂರ್ಣ ಗೌರವಾನ್ವಿತವಾಗಿವೆ. ಹಾಗಾಗಿ ವಂದೇ ಮಾತರಂ ಹಾಡುವುದು ಒಂದೇ ಧರ್ಮಕ್ಕೆ ಸೀಮಿತ ಅಲ್ಲ ಮತ್ತು ಅದು ಇಸ್ಲಾಂ ವಿರೋಧಿಯೂ ಅಲ್ಲ.

ದೇಶವನ್ನು ತಾಯಿ ರೂಪದಲ್ಲಿ ಸಂಬೋಧಿಸುವ ಪದ್ಧತಿ ಅರಬ್ ಮತ್ತು ಪಾರ್ಸಿಯಲ್ಲಿ ಹಿಂದಿನಿಂದಲೂ ನಡೆದು ಬಂದಿದೆ. ಉಮ್ಮಲ್ ಕೋಶ (ಬಾಮ್ಯ ಜನನಿ), ಉಮ್ಮುಲ್ ಮೂಮಿನಿನ್ (ಮುಮಿಮೋಗಳ ಜನನಿ) ಉಮ್ಮಲ್ ಕಿತಾಬ್ (ಪುಸ್ತಕಗಳ ಜನನಿ) ಇವೆಲ್ಲವೂ ತಾಯಿ ರೂಪದಲ್ಲಿ ಇರುವುದಾದರೆ ವಂದೇ ಮಾತರಂ ಪದಕ್ಕೆ ವಿರೋಧ ವ್ಯಕ್ತಪಡಿಸುವುದು ಎಷ್ಟು ಹಾಸ್ಯಾಸ್ಪದ ಅಲ್ಲವೇ?

ದೇಶದ ವರ್ಣನೆ ಇರುವ ಕಾರಣಕ್ಕಾಗಿ ವಂದೇ ಮಾತರಂ ಆಕ್ಷೇಪಾರ್ಹ ಎನ್ನುವುದಾದರೆ ಅರಬರ ರಾಷ್ಟ್ರಗೀತೆಯಲ್ಲಿ ಅರಬ್ ಖಂಡದ ಅನೇಕ ಭೂ ಭಾಗಗಳ ವರ್ಣನೆ ಇದೆಯಲ್ಲವೇ? ಉಜ್ಬೇಕಿಸ್ತಾನ ಅಥವಾ ಕಿರ್ಗಿಸ್ತಾನವಿರಲಿ, ಎಲ್ಲ ಕಡೆಯಲ್ಲೂ ಅವರ ರಾಷ್ಟ್ರಗೀತೆಯಲ್ಲಿ ಅಲ್ಲಿನ ಪಶುಪಕ್ಷಿಗಳ, ನದಿ ಬೆಟ್ಟಗಳ

ಸುಂದರ ವರ್ಣನೆ ಕಾಣಸಿಗುತ್ತದೆ. ಹಿಂದೂಗಳು ಗೋವುಗಳನ್ನು ಆಪ್ಯಾಯತೆಯಿಂದ ನೋಡುವಂತೆ ಯೆಮನ್ ದೇಶದ ಜನ ತಮ್ಮ ಹೆಸರುಗತ್ತೆಗಳನ್ನು ಪ್ರೀತಿಸುತ್ತಾರೆ. ಹೆಸರುಗತ್ತೆ ನಮ್ಮ ಜೀವನದ ರೇಖೆ ಎಂದು ಅಲ್ಲಿನ ರಾಷ್ಟ್ರಗೀತೆಯಲ್ಲಿ ಹೇಳಲಾಗಿದೆ. ನಂಗಾ ಪರ್ಬತ್ ಬಹು ದೂರದವರೆಗೂ ಹರಡಿದ್ದು ಅನೇಕ ಕಡೆ ನೀರಿನ ಜರಿಗಳು ಮಾತೆಯ ಸ್ತನಗಳಿಂದ ಮಮತೆಯ ಕ್ಷೀರಧಾರೆಯಂತೆ ಕವಲೊಡೆಯುವುದನ್ನು ನೋಡಬಹುದು. ಈಜಿಪ್ಟ್ ರಾಷ್ಟ್ರಗೀತೆಯಲ್ಲಂತೂ ಕೆಂಪು ಸಾಗರ, ಭೂಮಧ್ಯ ಸಾಗರ ಇತ್ಯಾದಿಗಳ ವರ್ಣನೆ ಇದೆ. ನೈಲ್ ನದಿ ಅವರಿಗೆ ಗಂಗೆಯಷ್ಟೇ ಪವಿತ್ರ, ಮರಣದ ನಂತರ ಸ್ವರ್ಗದಲ್ಲೂ ತಮಗೆ ನೈಲ್ ನದಿಯ ನೀರು ಕುಡಿಯಲು ದೊರೆಯಬೇಕೆಂದು ಅವರು ಬಯಸುತ್ತಾರೆ. ಪಿರಿಮಿಡ್‌ಗಳನ್ನು ಹೆಮ್ಮೆಯ ಸಂಕೇತ ಮತ್ತು ಪೂರ್ವಿಕರ ಪರಂಪರೆ ಎಂಬಂತೆ ರಾಷ್ಟ್ರಗೀತೆಯಲ್ಲಿ ಸ್ಮರಿಸಲಾಗುತ್ತದೆ.

ಡಾಕ್ಟರ್ ಇಕ್ಬಾಲ್ ತಮ್ಮ 'ನಯಾ ಶಿವಾಲಮ್...ನಲ್ಲಿ ಕಲ್ಲಿನಲ್ಲಿ ಕೆತ್ತಿದ ಮೂರ್ತಿಯಲ್ಲಿ ಮಾತ್ರವಲ್ಲ. ಭಾರತದ ಮಣ್ಣಿನ ಎಲ್ಲ ಕಣಕಣದಲ್ಲೂ ದೇವರೇ ಕಾಣುತ್ತಾನೆ ಎಂದು ಬರೆದಿದ್ದಾರೆ. ಭಾರತವನ್ನು ದೇವರು ಎಂದು ಹೇಳುವ ಮೂಲಕ ಇಕ್ಬಾಲ್ ಇಸ್ಲಾಂ ವಿರೋಧಿ ಭಾವನೆ ವ್ಯಕ್ತಪಡಿಸಿದ್ದಾರೆ ಎಂದು ವಂದೇ ಮಾತರಂನಲ್ಲಿ ಪ್ರತಿ ವಸ್ತುವಿನ ಪ್ರಶಂಸೆ ಇದ್ದು, ಇದು ಈ ಗೀತೆಯ ಮಹತ್ವವೂ ಆಗಿದೆ. ಪಾಕಿಸ್ತಾನದ ಜನಕ ಮಹಮದ್ ಆಲಿ ಜಿನ್ನಾ ಲಾಹೋರಿನ ಆಗಿನ ಪ್ರಸಿದ್ಧ ಕವಿ ಜಗನ್ನಾಥ್ ಪ್ರಸಾದ್ ಆಜಾದ್ ಮೂಲಕ ಮೊದಲ ರಾಷ್ಟ್ರಗೀತೆ ಬರೆಸಿದ್ದರು. ಒಂದೂವರೆ ವರ್ಷದ ನಂತರ ಲಿಯಾಕತ್ ಅದನ್ನು ಬದಲಾಯಿಸಿದರು. ಪಾಕಿಸ್ತಾನದಲ್ಲಿ ರಾಷ್ಟ್ರಗೀತೆ ಮೂರು ಬಾರಿ ಬದಲಾವಣೆಗೊಂಡಿದೆ. ಜಗತ್ತಿನ ಪ್ರತಿ ರಾಷ್ಟ್ರದ ಜನತೆ ತಮ್ಮ ದೇಶದ ಬಗ್ಗೆ ಹೆಮ್ಮೆ ಹಾಗೂ ವಿಶ್ವಾಸ ಹೊಂದಿರುವಾಗ ಭಾರತದ ಕೋಟಿ ಕೋಟಿ ಜನತೆ ತಮ್ಮ ಕಲರವ ನೀನಾದದ ಮೂಲಕ ವಂದೇಮಾತರಂ ಅನ್ನು ತಮ್ಮ ಹೃದಯದ ಮಿಡಿತವಾಗಿರಿಸಿದರೆ ಅದರಲ್ಲಿ ಆಶ್ಚರ್ಯದ ಮಾತೇನೂ ಇಲ್ಲ. ಏಕೆಂದರೆ ರಾಷ್ಟ್ರಕ್ಕೆ ವಂದನೆ ಸಲ್ಲಿಸುವುದು ನಮ್ಮ ಧರ್ಮ, ಕರ್ತವ್ಯ ಮತ್ತು ಜೀವನದ ಮರ್ಮವೂ ಹೌದು.

ಸಾಭಾರ : ವಿಜಯಕರ್ನಾಟಕ

* * * *

ಸತ್ಯಾಗ್ರಹದ ಹುಟ್ಟು ಮತ್ತು ಪರಿಕಲ್ಪನೆ

-ಸುರೇಂದ್ರ ಕೌಲಗಿ

"ನನ್ನಂತಹ ನೂರಾರು ಜನ ನಾಶವಾಗಲಿ, ಆದರೆ ಸತ್ಯ ಮಾತ್ರ ನಿಲ್ಲಲಿ"

-ಗಾಂಧೀ

(ಆತ್ಮ ಚರಿತ್ರೆಯ ಮುನ್ನುಡಿಯಲ್ಲಿ)

ಭಾರತ ತನ್ನ ಸ್ವಾತಂತ್ರ್ಯವನ್ನು ಸತ್ಯಾಗ್ರಹದ ಮೂಲಕ ಪಡೆಯಿತೆಂಬ ಸಂಗತಿ ವಿಶ್ವದಲ್ಲೆಲ್ಲ ಮಾನ್ಯವಾಗಿದೆ. ದೇಶದ ಇತಿಹಾಸದ ಪುಟಗಳಲ್ಲಿಯೂ ದಾಖಲಾಗಿದೆ. ಹಿಂಸಾಚಾರವಿಲ್ಲದೆ ಎಂಬುದಕ್ಕೆ ಬದಲಾಗಿ ಅಹಿಂಸಕವಾಗಿ ಎಂಬ ಶಬ್ದವನ್ನೂ ಉಪಯೋಗಿಸ ಬಯಸುತ್ತಾರೆ. ಹೇಗೆ ಧರ್ಮ ಎಂಬ ಪದಕ್ಕೆ ಸಮಾನಾರ್ಥಕ ಶಬ್ದ ಇಂಗ್ಲೀಷ್ ಭಾಷೆಯಲ್ಲಿ ಇಲ್ಲವೋ, ಇದ್ದರೂ ಸಹ ಅದು ಹೇಗೆ ಧರ್ಮ ಶಬ್ದದ ಒಳಾರ್ಥವನ್ನೂ, ಭಾವಾರ್ಥವನ್ನೂ, ಸಾಂಸ್ಕೃತಾರ್ಥವನ್ನೂ ಧ್ವನಿಸಲಾರದೊ ಹಾಗೆಯೇ Non-violence ಎಂಬುದು ಅಹಿಂಸಾ ಶಬ್ದದ ಮೂಲಾರ್ಥದಿಂದ ಬಹಳ ದೂರವಾಗಿದೆ. ಇದು ಹೇಗೇ ಇರಲಿ ಭಾತರದ ಸ್ವಾತಂತ್ರ್ಯ ಆಂದೋಲನವಂತೂ ವಿಶ್ವದ ಇತರ ದೇಶಗಳಲ್ಲಿ ನಡೆದ ಸ್ವಾತಂತ್ರ್ಯ ಆದೋಲನಗಳಿಗಿಂತ ಬಹು ಭಿನವಾಗಿತ್ತೆಂಬುದು ನಿಜ. ಭಿನ್ನತೆಗೆ ಕಾರಣ ಭಾರತೀಯ ಸ್ವಾತಂತ್ರ್ಯ ಆದೋಲನವು ಕೇವಲ ರಾಜಕೀಯ ಸ್ವಾತಂತ್ರ್ಯ ಆದೋಲನವಾಗಿದ್ದಿರದೆ ಬಹು ದೊಡ್ಡ ಜನ ಸಮೂಹದ ನೈತಿಕ ಉತ್ಥಾನದ ಆಂದೋಲನವೂ ಆಗಿತ್ತೆಂಬುದು. ಅದು ಇಂಗ್ಲೀಷರ ಆಡಳಿತದ ವಿರುದ್ಧದ ಹೋರಾಟವಾಗಿತ್ತಾದರೂ ಇಂಗ್ಲೀಷ್ ಜನಾಂಗದ ವಿರುದ್ಧ ದ್ವೇಷ ಬೆಳೆಸಲಿಲ್ಲ.

ಈ ಚಮತ್ಕಾರ ಹೇಗೆ ಸಂಭವಿಸಿತೆಂಬುದಕ್ಕೆ ಕಾರಣ ಸ್ವಾತಂತ್ರ್ಯ ಆಂದೋಲನವನ್ನು ಗಾಂಧೀಜಿಯವರು ವಿಶೇಷವಾದ ಪ್ರಯೋಗಕ್ಕಾಗಿ ಉಪಯೋಗಿಸಿಕೊಂಡಿದ್ದರೆಂಬುದು. ಸ್ವಾತಂತ್ರ್ಯ ಚಳುವಳಿಯ ೩೦ ವರ್ಷಗಳಷ್ಟು ಕಾಲವೂ ಸತ್ಯ-ಅಹಿಂಸೆ, ಸತ್ಯಾಗ್ರಹ ಮುಂತಾದ ವಿಚಾರಗಳ ಮಂಥನಕ್ಕಾಗಿ, ಸರ್ವೊದಯ ಸಮಾಜ ರಚನೆಯ ವಿಚಾರ ಮಂಥನಕ್ಕಾಗಿ ಜನರಿಗೆ ಸತ್ಯಾಗ್ರಹದಲ್ಲಿ ತರಬೇತು ಕೊಡುವುದಕ್ಕಾಗಿ ನಡೆಯಿತೆಂಬುದು ಇಲ್ಲಿ ಗಮನಾರ್ಹ. ಇಡೀ ಸ್ವಾತಂತ್ರ್ಯ ಚಳುವಳಿಯ ೩ ದಶಕಗಳ ಕಾಲವೆಲ್ಲ ಆಗ ಇದ್ದ ೨೦ ಕೋಟಿ ಜನತೆಯ ಸತ್ಯಾಗ್ರಹ ಶಿಕ್ಷಣಕ್ಕೆ ಮೀಸಲಾಗಿದ್ದಿತು. ವಿಶ್ವದ ಅನೇಕ ದೇಶಗಳಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವನ್ನು ನೋಡಿದರೆ ಯಾವ ದೇಶದ ಸ್ವಾತಂತ್ರ್ಯ

ಚವಳುವಳಿಯಲ್ಲೂ ಭಾರತೀಯ ಸ್ವಾತಂತ್ರ್ಯ ಚಳುವಳಿಯ ಗರ್ಭದಲ್ಲಿ ಅಡಗಿದ್ದಂಥ ಮೌಲ್ಯಗಳಾಗಲಿ, ಸ್ವಾತಂತ್ರ್ಯ ಚಳುವಳಿಗಿದ್ದ ದಿಗ್ದರ್ಶನವಾಗಲಿ, ಮುನ್ನೋಟವಾಗಲಿ, ಜನತಾಶಿಕ್ಷಣವಾಗಲಿ ಇರಲಿಲ್ಲ.

ಜನವರಿ ೩೦ರಂದು ಗಾಂಧೀ ಮೂರು ಗುಂಡುಗಳಿಗೆ ತುತ್ತಾದರು. ಆ ಸಮಯದಲ್ಲಿಯೇ ತಮ್ಮ ಬಲಿದಾನದ ಮೂಲಕ ಸತ್ಯ, ಅಹಿಂಸೆ, ಧರ್ಮ ಎಂಬ ಮೂರು ತತ್ವಗಳನ್ನು ಜಗತ್ತಿಗೆ ಕೊಟ್ಟು ಕುಸಿದರು. ಅಂದಿನಿಂದ ಜಗತ್ತು ಈ ಮೂರೂ ತತ್ವಗಳ ಅನ್ವೇಷಣೆಯಲ್ಲಿ ತೊಡಗಿದೆ. ಗಾಂಧೀ ಯಾವ ರೀತಿಯಲ್ಲಿ ಅವುಗಳನ್ನು ಅರ್ಥಮಾಡಿಕೊಂಡಿದ್ದರೋ ಆ ಅರ್ಥದಲ್ಲಿ ಅವುಗಳನ್ನು ತಿಳಿಯಲು ಜಗತ್ತು ವಿಫಲವಾಗಿದೆ. ಈ ವಿಫಲತೆಯ ಪರಿಣಾಮ ಎಷ್ಟು ಘೋರವಾಗಿದೆಯೆಂದರೆ ವಿಶ್ವ ಎರಡು ಮಹಾಯುದ್ಧಗಳ ಪೀಡೆಯನ್ನು ಅನುಭವಿಸಿತು; ನ್ಯೂಕ್ಲಿಯರ್ ಬಾಂಬ್‌ಗಳನ್ನು ಪಡೆಯಿತು; ಭಾರತ ಮತ್ತು ಪಾಕಿಸ್ತಾನ ಶಾಶ್ವತ ಶತ್ರು ದೇಶಗಳಾದವು. ಹಿಂಸಾಚಾರ, ಭಯೋತ್ಪಾದಕತೆ, ಧರ್ಮಾಂಧತೆ ಹೆಚ್ಚಿದವು. ರಾಜಕೀಯ ಸಾಮ್ರಾಜ್ಯವಾದದ ಸ್ಥಾನವನ್ನು ಆರ್ಥಿಕ ಸಾಮ್ರಾಜ್ಯವಾದ ಆಕ್ರಮಿಸಿಕೊಂಡಿತು; ಮೋಸ–ಕಪಟತನಗಳು ದಿನನಿತ್ಯದ ಸಂಗತಿಗಳಾದವು. ಇವೆಲ್ಲವುಗಳ ಪ್ರಮಾಣ ಎಷ್ಟು ಹೆಚ್ಚಾಗಿದೆ ಎಂದರೆ ಜಗತ್ತು ಅವುಗಳಿಂದಾಗಿ ಬೇಸತ್ತಿದೆ, ರೋಸಿಹೋಗಿದೆ, ಕಂಗಾಲಾಗಿದೆ ಆದ್ದರಿಂದ ವಿಶ್ವ ಪುನಃ ಗಾಂಧೀಯ ಚಿತಾಭಸ್ಮದಲ್ಲಿಯೆ ತನ್ನ ಮರುಹುಟ್ಟನ್ನು ಪಡೆಯಲು ಪ್ರಯತ್ನಿಸುತ್ತಿದೆ. ಮರುಹುಟ್ಟಿನ ಈ ಪ್ರಯತ್ನದ ಗಾಥೆಯೆ ಸತ್ಯಾಗ್ರಹದ ಇತಿಹಾಸವಾಗಿದೆ. ೧೮೬೯ ಅಕ್ಟೋಬರ್ ೨ ಗಾಂಧೀ ಜನ್ಮದಿನ. ೧೯೦೬ ಸೆಪ್ಟೆಂಬರ್ ೧೧ ಸತ್ಯಾಗ್ರಹ ಶಬ್ದದ ಜನ್ಮದಿನ. ಗಾಂಧೀ ಹುಟ್ಟಿ ೩೭ ವರ್ಷಗಳ ನಂತರ ಸತ್ಯಾಗ್ರಹವನ್ನು ಮೊದಲು ಪ್ರಯೋಗಿಸಿ ಪ್ರಪಂಚದ ನಿಸ್ಸಹಾಯಕ, ಮೂಕ, ಶೋಷಿತ ಜನಕ್ಕೆ ವಿಶಿಷ್ಟ ಪ್ರಕಾರದ ಹೋರಾಟದ ವಿಧಾನವೊಂದನ್ನು ತೋರಿಸಿಕೊಟ್ಟರು. ತನ್ಮೂಲಕ ಸರ್ವಸಮಾನರ ಸಮಾಜದ ಸರ್ವೋದಯ ಸಮಾಜ ರಚನೆಯ ವಿಧಾನವನ್ನು ತೋರಿಸಿಕೊಟ್ಟರು. ವಿಸ್ತಾರದಲ್ಲಿ ಮಾತ್ರವಲ್ಲ ಶಸ್ತ್ರಾಸ್ತ್ರದಲ್ಲೂ, ಸೈನಿಕಶಕ್ತಿಯಲ್ಲೂ ಮತ್ತು ಆರ್ಥಿಕವಾಗಿಯೂ ಬಲಿಷ್ಠವಾಗಿದ್ದ ಸಾಮ್ರಾಜ್ಯದ ವಿರುದ್ಧ ಸ್ವಾತಂತ್ರ್ಯ ಪಡೆಯಲು ಸತ್ಯಾಗ್ರಹವಿಧಾನವನ್ನು ಉಪಯೋಗಿಸಿ ಜಗತ್ತೆ ಚಕಿತಗೊಳ್ಳುವಂತೆ ಗಾಂಧೀ ಮಾಡಿದರು. ಈ ಮೊದಲು ಜಗತ್ತು ಫ್ರಾನ್ಸ್‌ಕ್ರಾಂತಿಯನ್ನು ನೋಡಿತ್ತು; ಅಮೇರಿಕಾದ ವಸಹಾತುಗಳ ಬಿಡುಗಡೆಯ ಹೋರಾಟವನ್ನು ನೋಡಿತ್ತು. ೧೫೧೭ರ ಸುಮಾರಿನಲ್ಲಿ ಮಾರ್ಟಿನ್ ಲೂಥರ್‌ನ ನೇತ್ರತ್ವದಲ್ಲಿ ನಡೆದ "ಮಹಾಪ್ರತಿಭಟನೆ"ಯನ್ನು ನೋಡಿತ್ತು. ಈ ಎಲ್ಲ ಬಗೆಯ ಹೋರಾಟಗಳಲ್ಲಿ ಹಿಂಸೆಯೆ ಪ್ರಧಾನವಾಗಿತ್ತು. ಮತ್ತು ರಾಜಕಾರಣ ಪ್ರೇರಕವಾಗಿತ್ತು. ಉದಾಹರಣೆಗೆ ಮಾರ್ಟಿನ್‌ಲೂಥರ್‌ನ ಮಹಾಪ್ರತಿಭಟನೆ ಧಾರ್ಮಿಕ ಸುಧಾರಣೆಯ

ಹೆಸರಿನಲ್ಲಿ ನಡೆದರೂ ಆ ಪ್ರತಿಭಟನೆಯ ಸಂದರ್ಭದಲ್ಲಿ ೧೦,೦೦೦ಕ್ಕೂ ಹೆಚ್ಚು ರೈತರ ಹತ್ಯೆಯಾಯಿತು. ಈ ಪ್ರತಿಭಟನೆಯ ಪರಿಣಾಮ ನೂರಾರು ವರ್ಷಗಳ ತರುವಾಯವು ಇಂದಿನ ಕ್ರಿಸ್ಥಾನ್ ಸಮಾಜದ ಮೇಲೆ ಇರುವುದನ್ನು ನೋಡುತ್ತೇವೆ. ಕ್ಯಾಥೋಲಿಕ್ ಮತ್ತು ಪ್ರಾಟಸ್ಟೆಂಟ್‌ಗಳೆಂದು ಇಡೀ ಕ್ರೈಸ್ತ ಸಮುದಾಯವೇ ಒಡೆದು ಹೋಗಿ ಇಂದಿಗೂ ಆ ಎರಡೂ ಗುಂಪಿನ ಮಧ್ಯೆ ಘರ್ಷಣೆಗಳಾಗುತ್ತಿರುವುದನ್ನು ನೋಡುತ್ತೇವೆ. ಮಾರ್ಟಿನ್ ಲೂಥರ್‌ನ ಧರ್ಮ ಸುಧಾರಣೆಯ ಗುರಿಗಳು ಸಾಧಿತವಾಗದೆ ಹೋದವು. ಅಮೇರಿಕೆಯ ನಾಗರಿಕ ಯುದ್ಧದ ಕಾಲದಿಂದ ಹಿಡಿದು ೨೧ನೇ ಶತಮಾನದ ಪ್ರಾರಂಭದವರೆಗೂ ಅಲ್ಲಿ ಯಾವ ಹೊಸ ಮೌಲ್ಯಗಳನ್ನು ಕುರಿತು ಚಿಂತನೆ ನಡೆಯಲಿಲ್ಲ. ಯಾವ ಹೊಸ ಸಮಾಜ ರಚನೆಯ ಕುರಿತು ಚಿಂತನೆ ನಡೆಯಲಿಲ್ಲ ಆಗ ಅಮೇರಿಕೆಯ ವಸಹಾತುಗಳಲ್ಲಿ ಚಿಂತನೆ ನಡೆದುದು ಕೇವಲ ಪ್ರಭುತ್ವದ ಸಮಸ್ಯೆ ಹಾಗೂ ಸಂವಿಧಾನಾತ್ಮಕ ಅಂಶಗಳ ಸಂಬಂಧವಾಗಿ. ಒಂದು ಅರ್ಥದಲ್ಲಿ ಇತಿಹಾಸದ ಆ ಕಾಲ ವೈಚಾರಿಕ ಶೂನ್ಯ ಯುಗವಾಗಿತ್ತು. ಈ ಎಲ್ಲ ಪ್ರಕಾರದ ಕ್ರಾಂತಿಗಳ ಜೊತೆಗೆ ರಷ್ಯಾದಲ್ಲಿ ನಡೆದ ಹಿಂಸಾತ್ಮಕ ಕ್ರಾಂತಿಯನ್ನು ಸಹ ಜಗತ್ತು ನೋಡಿತ್ತು.

ಇಂಥ ಹಿಂಸಾಮಯ ಕ್ರಾಂತಿಗಳ ಚಿತ್ರವಿರುವ ತೆರೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ನಾವು ಗಾಂಧೀ ನೇತೃತ್ವದ ಸ್ವಾತಂತ್ರ್ಯ ಹೋರಾಟವನ್ನು ಗಮನಿಸಿದಾಗ ಸತ್ಯಾಗ್ರಹದ ಮಹಿಮೆ ನಮಗೆ ಅರ್ಥವಾಗುತ್ತದೆ. ಸ್ವಾತಂತ್ರ್ಯ ಚಳುವಳಿ ಮತ್ತು ಸತ್ಯಾಗ್ರಹ ಇವೆರಡನ್ನು ಸಮೀಕರಣಗೊಳಿಸಬಹುದು. ಏಕೆಂದರೆ ಸ್ವಾತಂತ್ರ್ಯ ಚಳುವಳಿಯಿಂದಾಗಿ ಸತ್ಯಾಗ್ರಹ ರೂಪಿತಗೊಂಡಿತೊ ಅಥವಾ ಸತ್ಯಾಗ್ರಹ ವಿಧಾನದ ಕಾರಣದಿಂದಾಗಿ ಸ್ವಾತಂತ್ರ್ಯಚಳುವಳಿ ಹಿರಿಮೆ ಪಡೆಯಿತೊ ಎಂಬುದು ಸಮಾಜಶಾಸ್ತ್ರ ವಿದ್ಯಾರ್ಥಿಗಳಿಗೆ ಒಂದು ಕೂತೂಹಲಕಾರಿ ಅಧ್ಯಯನದ ವಿಷಯವಾಗಿದೆ. ಅಷ್ಟೇ ಕುತೂಹಲಕಾರಿಯಾದ ವಿಷಯ ಸತ್ಯಾಗ್ರಹ ಶಾಸ್ತ್ರದ ಉಗಮ, ಅದರ ಅನ್ವಯ, ಅದರ ಸಫಲತೆ, ವಿಫಲತೆ; ಇದೆಲ್ಲಕ್ಕೂ ಮಿಗಿಲಾದ ಆಸಕ್ತಿದಾಯಕ ವಿಷಯ ಸತ್ಯಾಗ್ರಹಶಾಸ್ತ್ರದ ಪ್ರವರ್ತಕನ ಜೀವನ, ಅವನ-ತ್ಯಾಗ-ಬಲಿದಾನಗಳು. ಸತ್ಯಾಗ್ರಹದ ಇತಿಹಾಸವೆಂದರೆ ಆ ಶಾಸ್ತ್ರದ ಸಜೀವರೂಪವಾಗಿದ್ದ ಗಾಂಧೀಯ ಇತಿಹಾಸವೇ ಆಗಿದೆ. ಏಕೆಂದರೆ ಗಾಂಧಿ ಮತ್ತು ಸತ್ಯಾಗ್ರಹ ಒಂದೇ ನಾಣ್ಯದ ಎರಡು ಮುಖಗಳೇನೊ ಎಂಬಷ್ಟರ ಮಟ್ಟಿಗೆ ಆ ಸಂಬಂಧ ಬೆಸೆದಿದೆ. ಈ ಸಂಬಂಧ ಏಸು ಮತ್ತು ಶಿಲುಬೆ; ಸಾಕ್ರೆಟಿಸ್ ಮತ್ತು ವಿಷದಬಟ್ಟಲು; ಗೆಲಿಲಿಯೊ ಮತ್ತು ಸಂಪ್ರದಾಯ ಸಮಾಜ; ಹರಿಶ್ಚಂದ್ರ ಮತ್ತು ಸ್ಮಶಾನ, ರಾಮ ಮತ್ತು ವನವಾಸ; ಬುದ್ಧ ಮತ್ತು ಬೋದಿವೃಕ್ಷ; ದ್ರೌಪದಿ ಮತ್ತು ಕೃಷ್ಣ ಇವೆಲ್ಲರ ಸಂಬಂಧ ಯಾವ ರೀತಿ ಅನನ್ಯವೂ, ಅವಿಚ್ಛಿನ್ನವೂ, ಅಪೂರ್ವವೂ ಆಗಿದೆಯೊ ಹಾಗೆ

ಇದೆ ಗಾಂಧೀ–ಸತ್ಯಾಗ್ರಹದ ಸಂಬಂಧ.

ಸತ್ಯಾಗ್ರಹ ಅಸ್ತ್ರವೇ ಅಥವಾ ಶಾಸ್ತ್ರವೇ ಎಂಬ ಜಿಜ್ಞಾಸೆ ಹುಟ್ಟುವುದರಲ್ಲಿ ಸಂದೇಹವಿಲ್ಲ. ಜೊತೆಗೆ ಅದಕ್ಕೇನಾದರೂ ವೈಜ್ಞಾನಿಕ ಆಧಾರವಿದೆಯೇ ಎಂಬ ಪ್ರಶ್ನೆಯೂ ಹುಟ್ಟುತ್ತದೆ. ಗಾಂಧೀ ಸತ್ಯಾಗ್ರಹವನ್ನು ದೇಶದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಉಪಯೋಗಿಸಿದ್ದರಿಂದ ಮತ್ತು ಅನೇಕ ಬಾರಿ ಸತ್ಯಾಗ್ರಹವು ಇಂಗ್ಲೀಷ್ ಸರ್ಕಾರವನ್ನು ಪೇಚಿಗೆ ಸಿಲುಕಿಸಿದ್ದರಿಂದ ಹಾಗೂ ಸತ್ಯಾಗ್ರಹದಲ್ಲಿ ತೊಡಗಿದ್ದಂಥ ಅಹಿಂಸಕ ಸ್ವಾತಂತ್ರ್ಯ ಸೇನಾನಿಗಳ ವಿರುದ್ಧ ಇಂಗ್ಲೀಷ್ ಸರ್ಕಾರ ಗುಂಡುಗಳನ್ನು ಹಾರಿಸುವುದು, ಲಾಠಿ ಏಟು ಕೊಡುವುದು ಮತ್ತು ಬಂಧಿಸುವುದು ಇತ್ಯಾದಿ ಹಿಂಸಾತ್ಮಕ ಕ್ರಮಗಳನ್ನು ಕೈಗೊಂಡಿದ್ದರಿಂದ ಸತ್ಯಾಗ್ರಹ ಒಂದು ಅಸ್ತ್ರವಾಗಿತ್ತೆಂದು ಇಂಗ್ಲೀಷರು ಭಾವಿಸುತ್ತಿದ್ದರು. ಯಾವಾಗಲೂ ಒಂದು ಅಸ್ತ್ರದ ಉಪಯೋಗ ಇನ್ನೊಂದು ಅಸ್ತ್ರದ ಉಪಯೋಗಕ್ಕೆ ದಾರಿಮಾಡಿ ಕೊಡುತ್ತದೆ. ಆ ದೃಷ್ಟಿಯಿಂದ ಸತ್ಯಾಗ್ರಹ ಒಂದು ಅಸ್ತ್ರವಾಗಿತ್ತೇ ಎಂಬ ಅನುಮಾನ ಮೂಡುವ ಸಾಧ್ಯತೆ ಇದೆ. ಆದರೆ ಸತ್ಯಾಗ್ರಹದ ಮೂಲವನ್ನು ಮತ್ತು ಅದರ ಚಾಲನೆಯ ಹಿಂದಿರುವ ವ್ಯಕ್ತಿಯನ್ನು ನೋಡಿದಾಗ ಸತ್ಯಾಗ್ರಹ ಒಂದು ಶಸ್ತ್ರವಾಗಿರದೆ ಅದು ಒಂದು ಶಾಸ್ತ್ರವಾಗಿದೆ ಎಂದು ಅರಿವಾಗುವುದರಲ್ಲಿ ಸಂದೇಹವಿಲ್ಲ. ಅಷ್ಟೇ ಅಲ್ಲ, ಇನ್ನೂ ಮುಂದಕ್ಕೆ ಹೋಗಿ ನೋಡುವುದಾದರೆ ಅದು ಶಾಸ್ತ್ರವೂ ಆಗಿರದೆ ಪರಮಸಾತ್ವಿಕ ಜೀವನ ವಿಧಾನವಾಗಿದೆಯೆಂದು ದೃಢಪಡುತ್ತದೆ. ಹೀಗೆ ಹೋರಾಟದ ಒಂದು ಅಸ್ತ್ರ ಶಾಸ್ತ್ರವಾಗಿ, ಶಾಸ್ತ್ರವೇ ಸಾತ್ವಿಕ ಜೀವನದ ವಿಧಾನವಾಗಿ ರೂಪಾಂತರಗೊಂಡ ಉದಾಹರಣೆಗಳು ಜಗತ್ತಿನಲ್ಲಿ ಎಲ್ಲಿಯೂ ಇಲ್ಲ ಎಂದು ನಮಗೆ ಗೊತ್ತಾದರೆ ಅದು ವಿಶ್ವದ ಅದ್ಭುತ ವಿಷಯಗಳಲ್ಲಿ ಒಂದೆಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಸತ್ಯಾಗ್ರಹದ ಉಗಮದ ಇತಿಹಾಸವನ್ನು ಭಗೀರಥ–ಗಂಗಾವತರಣಕ್ಕೆ ಹೋಲಿಸಬಹುದಾದಷ್ಟು ಅವೆರಡರಲ್ಲಿ ಸಾಮ್ಯವಿದೆ ಭಗೀರಥ ಸತ್ತು ಹೋಗಿದ್ದ ತನ್ನ ಹಿರಿಯರನ್ನು ಜೀವಂತವಾಗಿಸಲು ಗಂಗೆಯನ್ನು ಹರಿಸಿದ; ಅದೇ ರೀತಿ ಆತ್ಮವಿಶ್ವಾಸವನ್ನೂ, ಸ್ವಾಭಿಮಾನವನ್ನೂ, ಕ್ರಿಯಾಶೀಲತೆಯನ್ನೂ ಕಳೆದುಕೊಂಡಿದ್ದ ಭಾರತೀಯರನ್ನು ಆತ್ಮಸ್ಥೈರ್ಯವುಳ್ಳವರನ್ನಾಗಿಯೂ ಸ್ವಾಭಿಮಾನವುಳ್ಳವರನ್ನಾಗಿಯೂ ಕ್ರಿಯಾವಂತರನ್ನಾಗಿಸಲೂ ಗಾಂಧೀ ಸತ್ಯಾಗ್ರಹದ ಉಪಯೋಗವನ್ನು ಮಾಡಿದರು. ಒಂದು ವೇಳೆ ಗಂಗಾವತರಣವಾಗದೆ ಹೋಗಿದ್ದರೆ ಹೇಗೆ ಸತ್ತವರ ಉದ್ಧಾರವಾಗುತ್ತಿರಲಿಲ್ಲವೋ ಹಾಗೆಯೇ ಭಾರತೀಯರ ಮನೋನ್ಮಂದಿರದಲ್ಲಿ ಸತ್ಯಾಗ್ರಹ ಪ್ರತಿಷ್ಠಿತಗೊಳ್ಳದೆ ಹೋಗಿದ್ದರೆ ಭಾರತೀಯರು ಸ್ವಾತಂತ್ರೋದಯವನ್ನು ಕಾಣಲು ಸಾಧ್ಯವಾಗುತ್ತಿರಲಿಲ್ಲ.

ಭಾರತದ ಸ್ವಾತಂತ್ರ್ಯ ಆದೋಲನ ಅನೇಕ ತೊಡಕುಗಳಿಂದ ಕೂಡಿದುದಾಗಿತ್ತು. ಮೊಟ್ಟಮೊದಲನೆಯದಾಗಿ ಸ್ವಾತಂತ್ರ್ಯ ಪಡೆಯಲು ಬಯಸುತ್ತಿದ್ದ ಜನಸ್ತೋಮವೇ ಅಜ್ಞಾನ, ಅನಕ್ಷರತೆ, ಬಡತನ ಇತ್ಯಾದಿ ಪೆಡಂಭೂತಗಳ ಬಲಿಷ್ಠ ಬಾಹುಗಳ ಬಂಧನಕ್ಕೊಳಗಾಗುವುದರ ಜೊತೆಗೆ ಜಾತಿ-ಧರ್ಮ-ಭಾಷೆಗಳ ವೈಷಮ್ಯಗಳ ಚಕ್ರ ಸುಳಿಯಲ್ಲಿಯೂ ಸಿಕ್ಕಿಹಾಕಿಕೊಂಡಿತ್ತು. ಎಲ್ಲೆಲ್ಲಿಯೂ ಗಾಡಾಂಧಾಕಾರವಿತ್ತು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಅರಬ್ಬೀ ಸಮುದ್ರದಿಂದ ಬಂಗಾಳಕೊಲ್ಲಿಯವರೆಗಿನ ವಿಸ್ತಾರವಾದ ಪ್ರದೇಶದಲ್ಲಿ ಹಬ್ಬಿದ ಇಂಥ ಜಡ ಜನಸ್ತೋಮಕ್ಕೆ ರಾಜಕೀಯದ ಎಲ್ಲ ಕ್ಷೇತ್ರಗಳಲ್ಲಿ ತಿಳುವಳಿಕೆ ಕೊಡುವುದು ಹಿಮಾಲಯ ಪರ್ವತ ಸದೃಶವಾದ ಕೆಲಸವಾಗಿತ್ತು. ಆಂದೋಲನದ ಪ್ರತಿ ಹೆಜ್ಜೆಯೂ, ದೇಶದ ಐಕ್ಯತೆಗೆ ಧಕ್ಕೆ ತರುವಂಥ ಸಮಸ್ಯೆಯಾಗಿ ಪರಿಣಮಿಸುತ್ತಿತ್ತು. ಇದು ಸಾಲದೆಂಬಂತೆ ಇಂಗ್ಲೀಷ್ ಸರ್ಕಾರ ಒಡೆದು ಆಳುವ ನೀತಿಯನ್ನು ಬಿರುಸಾಗಿ ಅನುಸರಿಸುತ್ತಲಿತ್ತು. ಆದ್ದರಿಂದ ದೇಶದ ಪ್ರತಿಯೊಂದು ಧರ್ಮವೂ, ಪ್ರತಿಯೊಂದು ಜಾತಿಯೂ ಸ್ವಾತಂತ್ರ್ಯದೊರೆತಲ್ಲಿ ತನಗೆಷ್ಟು ರಾಜಕೀಯ ಲಾಭ ದೊರೆಯುತ್ತದೆಂಬುದನ್ನು ನೋಡುತ್ತಿತ್ತೇ ವಿನಃ ದೇಶದ ಐಕ್ಯತೆ ಕುರಿತು ಆಲೋಚಿಸತ್ತಿರಲ್ಲಿಲ್ಲ. ಹೀಗಾಗಿ ದೇಶದ ಜನತೆಯ ಶಕ್ತಿಯೆಲ್ಲ ಒಂದು ಉದ್ದೇಶಕ್ಕಾಗಿ ಕೇಂದ್ರೀಕೃತವಾಗದೆ, ಹಲವಾರು ಸ್ವಾರ್ಥಪ್ರೇರಿತ ಉದ್ದೇಶಗಳ ಈಡೆರಿಕೆಗಾಗಿ ವ್ಯಯವಾಗುತ್ತಿತ್ತು. ಬಲಿಷ್ಠ ದೇಶದ ನಿರ್ಮಾಣಕ್ಕೆ ಇದು ಮಾರಕವಾಗಿತ್ತು.

ಭಾರತೀಯರ ಸಾಮರ್ಥ್ಯವನ್ನು ಅಪವ್ಯಯ ಗೊಳಿಸುತ್ತಿದ್ದ ಒಂದು ಬಹು ಮುಖ್ಯ ವಿಷಯ ಹಿಂದೂ-ಮುಸ್ಲಿಂ ಕೋಮು ಘರ್ಷಣೆ ಆಗಿದ್ದಿತು. ಇಂಗ್ಲೀಷರ ಆಳ್ವಿಕೆ ಪ್ರಾರಂಭವಾಗುವ ಮೊದಲು ಮುಸ್ಲಿಮರು ಭಾರತವನ್ನು ಮುನ್ನೂರು ವರ್ಷ ಆಳಿದ್ದರು. ಆಗ ಹಿಂದುಗಳು ಭಾರತದಲ್ಲಿ ಬಹುಸಂಖ್ಯಾತರಾಗಿದ್ದರು ಮತ್ತು ಮುಸ್ಲಿಮರು ಅಲ್ಪ ಸಂಖ್ಯಾತರಾಗಿದ್ದರು. ರಾಜಕೀಯ ಅಸಮತೋಲನ ಖಂಡಿತವಾಗಿಯೂ ಇತ್ತು . ಆದರೂ ಕೂಡ ಹಿಂದೂ ಮತ್ತು ಮುಸ್ಲಿಮರಲ್ಲಿ ಕೋಮ ಭಾವನೆ ಆಧಾರಿತ ವ್ಯಾಪಕ ಪ್ರಮಾಣದ ಹತ್ಯಾಕಾಂಡಗಳು ನಡೆದ ಘಟನೆಗಳು ಇತಿಹಾಸದಲ್ಲಿ ದಾಖಲಾಗಿಲ್ಲ, ನೂರಾರು ವರ್ಷಗಳಿಂದ ಒಂದೇ ದೇಶದ ನಾಗರೀಕರಾಗಿದ್ದ ಹಿಂದು ಮತ್ತು ಮುಸಲ್ಮಾನರಲ್ಲಿ ತಮ್ಮ ರಾಜಕೀಯ ಉದ್ದೇಶಕ್ಕಾಗಿ ಇಂಗ್ಲೀಷರು ಕೋಮುಭಾವನೆಯನ್ನು ಬಿತ್ತಿ ಅವೆರಡು ಸಮುದಾಯದವರು ಶಾಶ್ವತವಾಗಿ ಬದ್ಧದ್ವೇಷಿಗಳಾಗುವಂತೆ ಮಾಡಿದರು. ಹಿಂದೂ-ಮುಸಲ್ಮಾನರ ಈ ದ್ವೇಷ, ದೇಶವನ್ನೇ ಒಡೆದುಹಾಕುವಷ್ಟರ ಮಟ್ಟಿಗೆ ಪ್ರಬಲಗೊಳ್ಳುತ್ತಾ ಹೋಯಿತು. ದೇಶದ ಐಕ್ಯತೆಯ ದೃಷ್ಟಿಯಿಂದಲೂ, ಎರಡೂ ಕೋಮುಗಳ ಮಧ್ಯೆ ಸೌಹಾರ್ದತೆಯನ್ನು ಕಾಪಾಡಿಕೊಂಡು ಬರುವ

ದೃಷ್ಟಿಯಿಂದಲೂ ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದು ಬಹಳ ಅಗತ್ಯವಾಗಿತ್ತು. ಈ ಪರಿಹಾರವನ್ನು ರಕ್ತಕ್ಕೆ ಬದಲಾಗಿ ರಕ್ತವನ್ನು ಹರಿಸುವ ಮೂಲಕ ಪಡೆಯಲು ಸಾಧ್ಯವಿರಲಿಲ್ಲ ಮತ್ತು ಸಾಧುವೂ ಆಗಿರಲಿಲ್ಲ. ಈ ಸಮಸ್ಯೆಯ ಪರಿಹಾರಕ್ಕೆ ಸತ್ಯ ಮತ್ತು ಪ್ರೇಮ ಆಧಾರಿತ ಸಾತ್ವಿಕ ಪರಿಹಾರವೆ ಬೇಕಾಗಿತ್ತು. ಅಂದರೆ ಸತ್ಯಾಗ್ರಹದ ಮಾರ್ಗ ಬೇಕಾಗಿತ್ತು. ಸತ್ಯಾಗ್ರಹದ ಮಾರ್ಗವನ್ನು ಗಾಂಧಿಯಲ್ಲದೆ ಇನ್ನು ಯಾರು ತಾನೆ ತೋರಿಸಲು ಸಾಧ್ಯವಿತ್ತು? ಇನ್ನು ಬೇರೆ ಯಾರಿಗೆ ತಾನೆ ಧೈರ್ಯವಿತ್ತು? ಈ ಕ್ಲಿಷ್ಟತಮ ಸಮಸ್ಯೆಯ ಪರಿಹಾರಕ್ಕಾಗಿ ಮತ್ತು ದೇಶವನ್ನು ಯಾವುದೇ ಪ್ರಕಾರದ ಕೋಮುಭಾವನೆಯಿಂದ ಮುಕ್ತಗೊಳಿಸಲು ಗಾಂಧೀ ತಮ್ಮ ಸತ್ಯಾಗ್ರಹ ವಿಧಾನದ ಪ್ರಯೋಗಕ್ಕಾಗಿ ಕಂಕಣಬದ್ಧರಾಗಿಯೇ ಇದ್ದರು. ಇಂಥ ಪ್ರಸಂಗಗಳಿಗೆ, ಇಂಥ ಪ್ರಯೋಗಗಳಿಗೆ ಗಾಂಧೀ ಹೇಳಿ ಮಾಡಿಸಿದಂಥ ವ್ಯಕ್ತಿಯಾಗಿದ್ದರು. ಅವರೇ ತಮ್ಮ ಆತ್ಮಚರಿತ್ರೆಯಲ್ಲಿ ತಮ್ಮ ಸ್ವಭಾವವನ್ನು ಹೀಗೆ ವರ್ಣಿಸಿಕೊಂಡಿದ್ದಾರೆ, "ನವೀನ ಪ್ರಕಾರದ ಅನುಭವಗಳನ್ನು ಪಡೆಯುವುದು ನನಗೆ ಇಷ್ಟದ ವಿಷಯವಾಗಿತ್ತು." ಆದ್ದರಿಂದ ತಮ್ಮ ಸತ್ಯಾಗ್ರಹದ ವಿಧಾನಗಳ ಮೂಲಕ ಕೋಮು ದ್ವೇಷದ ದಳ್ಳುರಿಯನ್ನು ಆರಿಸಲು ಮುಂದಾದರು. ಕತ್ತಿ ಬಲಿಷ್ಠರ ಅಸ್ತ್ರವಾದರೆ ಸತ್ಯಾಗ್ರಹ ದುರ್ಬಲರ ಅಸ್ತ್ರವೆಂದು ಸಿದ್ಧಮಾಡಿ ತೋರಿಸಲು ಸಿದ್ಧವಾದರು. ನಿರ್ಬಲರನ್ನು ಬಲರಾಮನನ್ನಾಗಿ ಮಾಡಲು ಹೊರಟ ಈ ಗಾಂಧೀ ಸ್ವತಃ ಬಲಿಷ್ಠನೂ ಆಗಿರಲಿಲ್ಲ, ಶ್ರೀಮಂತನೂ ಆಗಿರಲಿಲ್ಲ. ಯಾವ ಸೇನಾಧಿಪತಿಯೂ ಆಗಿರಲಿಲ್ಲ. ಬಾಲಕನಾಗಿದ್ದಾಗ ಕತ್ತಲೆಯೆಂದರೆ ಹೆದರುತ್ತಿದ್ದ, ಸಹಪಾಠಿಗಳಿಂದ ದೂರವಿರುತ್ತಿದ್ದ. ತನ್ನ ಸಮವಯಸ್ಸಿನ ಹೆಂಡತಿ ಕಸ್ತೂರಬಾಗಿಂತಲೂ ಪುಕ್ಕನಾಗಿದ್ದ. ಯುವಕನಾಗಿದ್ದಾಗಲೂ ಅತ್ಯಂತ ಸಂಕೋಚ ಪ್ರವೃತ್ತಿಯುವನಾಗಿದ್ದ. ಯೌನವಾವಸ್ಥೆಯಲ್ಲೂ ಹೆಣ್ಣು ಎಂದರೆ ಮಾರುದ್ದ ಹಾರಿ ಹೋಗುತ್ತಿದ್ದ. ವಿದ್ಯಾಭ್ಯಾಸ ಮಾಡಿ ಬ್ಯಾರಿಸ್ಟರ್‌ನಾದ ಮೇಲೂ ವಕೀಲಿ ಮಾಡಲು ಅಸಮರ್ಥನಾಗಿದ್ದ. ವಾದ ಮಾಡಲಾಗದೆ ಕೋರ್ಟಿನಲ್ಲಿ ಕುಸಿದಿದ್ದ. ಶಾಲೆಯಲ್ಲಿ ಸಾಧಾರಣ ಗುಣಮಟ್ಟದ ವಿದ್ಯಾರ್ಥಿಯಾಗಿದ್ದ. ನೆಪೋಲಿಯನ್ನನ್ನಲ್ಲಿದ್ದಂತಹ ಮಹಾತ್ವಾಕಾಂಕ್ಷೆಗೆ ಆಕರ್ಷಿತನಾಗದೆ ರಾಮನ ವನವಾಸಕ್ಕೆ ಮನಸೋತಿದ್ದ. ಹೀಗೆ ದುರ್ಬಲನಾಗಿದ್ದ ವ್ಯಕ್ತಿಯೊಬ್ಬ ಸತ್ಯದ ಆಶ್ರಯವನ್ನು ಪಡೆಯುವುದರ ಮೂಲಕ ಆತ್ಮಶಕ್ತಿಯನ್ನು ಬೆಳಸಿಕೊಂಡು ಅಣುಶಕ್ತಿಗೆ ಸೆಡ್ಡು ಹೊಡೆದು ನಿಂತಿದ್ದ. ತನ್ಮೂಲಕ ದೊಡ್ಡ ರಾಜಕಾರಣಿಗಳಾಗಿದ್ದ ಜನರಲ್ ಸ್ಮಟ್ಸ್, ಬೋಥಾ, ವಿನ್ಸಂಟ್ ಚರ್ಚಿಲ್, ಆಲ್‌ಫ್ರೆಡ್ ಹಿಟ್ಲರ್, ರೂಸ್‌ವೆಲ್ಟ್, ಸ್ಟಾಲಿನ್ ಮುಂತಾದವರನ್ನು ಬೆರಗುಗೊಳಿಸಿದಷ್ಟೆ ಅಲ್ಲದೆ ಮಾರಕಾಸ್ತ್ರಗಳ ಪೂಜಕರಾಗಿದ್ದವರಿಗೆ ತನ್ನ ಅಹಿಂಸಾತತ್ವ ಹಾಗೂ ಸತ್ಯಾಗ್ರಹದ ವಿಚಾರಗಳ ಕಡೆಗೆ ಅವರ ಗಮನವನ್ನು ಸೆಳೆಯಲು ಹಾಗೂ ಅವರ ಮನಪರಿವರ್ತನೆ

ಮಾಡಲು ಪ್ರಯತ್ನಿಸಿದ್ದು ಪೋರ್‌ಬಂದರ್‌ನ ಸಾಮಾನ್ಯ ಬಾಲಕನ ಅಸಮಾನ್ಯವಾದ ಸಾಹಸವೇ ಆಗಿತ್ತು. ಸತ್ಯಾಗ್ರಹಿಯ ನಿಜಕರ್ತವ್ಯದ ಉದಾಹರಣೆಯಾಗಿತ್ತು.

ಎರಡನೆ ಮಹಾಯುದ್ಧದ ಕಾಲಕ್ಕೆ ಅಂತರರಾಷ್ಟ್ರೀಯ ಸತ್ಯಾಗ್ರಹಿಯಾಗಿ ಹೆಸರು ಮಾಡಿದ್ದ ಗಾಂಧಿಯ ಸತ್ಯಾಗ್ರಹ ಹೆಮ್ಮರವಾಗಿ ಬೆಳೆಯುವ ಮುನ್ನ ಅದು ಗಾಂಧೀ ಎಳೆಯನಾಗಿದ್ದಾಗಲೆ ಅವನ ಮನಸ್ಸಿನಲ್ಲಿ ರೂಪಗೊಂಡಿತ್ತು. ಬಾಲಕನಾಗಿದ್ದಾಗ ಹರಿಶ್ಚಂದ್ರ ನಾಟಕನೋಡಿ ಹರಿಶ್ಚಂದ್ರನ ಸತ್ಯದ ಪ್ರೇಮಕ್ಕೆ ಮಾರು ಹೋಗಿದ್ದ. ತಾನೇ ಸ್ವತಃ ಹಲವಾರು ಬಾರಿ ಹರಿಶ್ಚಂದ್ರನಾಗಿ ಅಭಿನಯಿಸಿ ಸಂತೋಷಪಟ್ಟಿದ್ದ. ಹರಿಶ್ಚಂದ್ರನ ಸತ್ಯ ಪ್ರೇಮದ ಈ ಪ್ರಭಾವ ದಕ್ಷಿಣ ಆಫ್ರಿಕಾದಲ್ಲಿ ವರ್ಣದ್ವೇಷದ ವಿರುದ್ಧದ ಹೋರಾಟದ ಮೂಲಕ, ಅಲ್ಲಿದ್ದ ಕರಾಳ ಶಾಸನದ ವಿರುದ್ಧದ ಹೋರಾಟದ ಮೂಲಕ ಪರಿಪಕ್ವಗೊಳ್ಳುತ್ತಾಹೋಯಿತು. ಗಾಂಧೀ ಭಾರತಕ್ಕೆ ಬಂದಾದ ನಂತರ ಚಂಪಾರಣ್ ಸತ್ಯಾಗ್ರಹ, ಖೇಡ ಸತ್ಯಾಗ್ರಹ, ಬಾರ್ಡೋಲಿ ಸತ್ಯಾಗ್ರಹ, ಉಪ್ಪಿನ ಸತ್ಯಾಗ್ರಹ, ಅಹಮದಾಬಾದ್ ಗಿರಣಿ ಮಾಲೀಕರ ವಿರುದ್ಧದ ಸತ್ಯಾಗ್ರಹದಲ್ಲಿ ಇನ್ನಷ್ಟು ಪರಿಪಕ್ವಗೊಂಡಿತು.

ಶ್ರವಣನ ಮಾತಾ-ಪಿತೃಭಕ್ತಿಯಿಂದ ಪ್ರಭಾವಿತನಾಗಿ ಹಿರಿಯರ ಬಗ್ಗೆ ಗೌರವಾದರಗಳನ್ನು ಬೆಳೆಸಿಕೊಂಡಿದ್ದ. ತನ್ನ ಗುರುವೆಂದು ಭಾವಿಸಿದ್ದ ಗೋಖಲೆಯವರು ತೀರಿಕೊಂಡಾಗ ಒಂದು ವರ್ಷ ಕಾಲಲ್ಲಿ ಚಪ್ಪಲಿಯಿಲ್ಲದೆ ಓಡಾಡಿದ. ಅಧ್ಯಾಪಕರ ಸೂಚನೆ ಇದ್ದರೂ ಪಕ್ಕದಹುಡುಗನ ಬರಹವನ್ನು ನೋಡಿ ಬರೆಯಲು ಇಷ್ಟ ಪಡದ ಮುಗ್ಧ ವಿದ್ಯಾರ್ಥಿ. ಇಂಥ ಸಾಮಾನ್ಯ ವ್ಯಕ್ತಿಯೊಬ್ಬ ಇದೇ ಸೆಪ್ಟೆಂಬರ್ ೧೧ ರಂದು ನೂರು ವರ್ಷಗಳ ಹಿಂದೆ ‘ ಸದಾಗ್ರಹ ’ವೆಂಬ ಶಬ್ದವನ್ನು ತೊರೆದು ತಮ್ಮ ಅಂತಃಕರಣಕ್ಕೆ ಸಾಕ್ಷಿಯೆನಿಸುವ ಸತ್ಯಾಗ್ರಹ ಶಬ್ದವನ್ನಷ್ಟೇ ಅಲ್ಲ ಹೋರಾಟ ಮಾಡುವವನೂ, ಹೋರಾಟಕ್ಕೆ ಕಾರಣ ನಾದವನೂ ಇಬ್ಬರೂ ಆಧ್ಯಾತ್ಮಿಕ ನೆಲೆಗೆ ಬಂದು ಇಬ್ಬರೂ ಸತ್ಯ ಶೋಧನೆಯ ಮೂಲಕ ಆತ್ಮ ಸಾಕ್ಷಾತ್ಕಾರ ಅಥವಾ ಈಶ್ವರನ ಪ್ರತ್ಯಕ್ಷ ದರ್ಶನ ಅಥವಾ ಮೋಕ್ಷ ಪಡೆಯುವಂಥ ಅಸಾಧಾರಣವಾದ ಆದರೆ ಸಾಮಾನ್ಯವಾಗಬಹುದಾದಂಥ ಹೋರಾಟದ ಮಾರ್ಗವನ್ನು ಪ್ರಪಂಚಕ್ಕೆ ತೊರಿಸಿದಂಥ ಗಾಂಧಿಯ ದೇಶದಲ್ಲಿ ಹುಟ್ಟಿದ ನಾವೆಲ್ಲರೂ ಅದೃಷ್ಟಶಾಲಿಗಳು.

* * * *

ಗಾಂಧಿ ಮಾರ್ಗಿ ವಿನೋಬಾರ ವೇದಾಧ್ಯಯನ

– (ಸಂಗ್ರಹ) *ಗೌತಮ ಬಜಾಜ್*

"ನಾನು ಬಹಳ ಚಿಕ್ಕವಯಸ್ಸಿನವನಾಗಿದ್ದಾಗ ಬಡೋದೆಯಲ್ಲಿ ಮನೆ ಮನೆಗೆ ಹೋಗಿ ಪುಸ್ತಕಗಳ ಭಿಕ್ಷೆ ಕೇಳುತ್ತಿದ್ದೆ. ಯಾವುದೇ ಮನೆಯಿಂದ ಪುಸ್ತಕ ದೊರೆಯಲಿ, ತೆಗೆದುಕೊಳ್ಳುತ್ತಿದ್ದೆ. ಹೀಗೆ ನನಗೆ ಎರಡು–ಮೂರು ಸಾವಿರ ಪುಸ್ತಕಗಳು ದಾನದಲ್ಲಿ ದೊರೆತವು. ಅವುಗಳನ್ನು ವಿದ್ಯಾರ್ಥಿ ಮಂಡಲದಲ್ಲಿ ಸಂಗ್ರಹಮಾಡಲಾಯಿತು. ಆ ಪುಸ್ತಕಗಳಲ್ಲಿ ಋಗ್ವೇದದ ಪುಸ್ತಕ ಕೂಡ ಇತ್ತು. ನನ್ನ ತಾಯಿಯ ಮೃತ್ಯು ೧೯೧೮ ರಲ್ಲಿ ಶರತ್‌ಪೂರ್ಣಿಮೆಯ ನಾಲ್ಕು ದಿನಗಳ ನಂತರದ ಚತುರ್ಥಿಯಂದು ಆಯಿತು." ಆಗ ನಾನು, "ಬ್ರಾಹ್ಮಣರ ಮೂಲಕ ಹಳೆಯ ಪದ್ಧತಿಯಿಂದ ದಹನ ವಿಧಿ ಮಾಡುವುದರಲ್ಲಿ ನನಗೆ ವಿಶ್ವಾಸವಿಲ್ಲ. ತಾಯಿಯ ಅಂತಿಮ ಕ್ರಿಯೆಯನ್ನು ನಾನೇ ಮಾಡುವೆ." ಎಂದು ಹೇಳಿದೆ. ಆದರೆ ಅದು ಮಾನ್ಯವಾಗದಿದ್ದಾಗ ನಾನು ಸ್ಮಶಾನಕ್ಕೆ ಹೋಗಲಿಲ್ಲ. ಅದೇ ದಿನದಿಂದ ವೇದಾಧ್ಯಾಯನ ಆರಂಭಿಸಿದೆ. ತಾಯಿಯ ಮರಣದ ದಿನ ಋಗ್ವೇದದ ಆ ಪುಸ್ತಕವನ್ನು ಎತ್ತಿಕೊಂಡೆ. ಒಬ್ಬ ತಾಯಿ ಹೋದಳು ಎರಡನೆ ತಾಯಿಯ ಆಶ್ರಯ ಪಡೆದೆ. ಆ ಸಮಯದಲ್ಲಿ ನನಗೆ ವೇದ ಹೆಚ್ಚು ಅರ್ಥವಾಗಲಿಲ್ಲ. ಏಕೆಂದರೆ ನನ್ನ ಅಧ್ಯಯನ ವೇದ ಧರ್ಮವನ್ನು ಅರ್ಥಮಾಡಿಕೊಳ್ಳುವಷ್ಟು ಪರ್ಯಾಪ್ತವಿರಲಿಲ್ಲ. ನನ್ನ ಬುದ್ಧಿ ಕೂಡ ಅದನ್ನು ಗ್ರಹಿಸುವಷ್ಟು ಪರ್ಯಾಪ್ತವಾಗಿರಲಿಲ್ಲ. ಆದರೂ ಕೂಡ ನಾನು ವೇದದ ಆಶ್ರಯ ಪಡೆಯುವುದರ ಹಿಂದೆ ಎರಡು ಕಾರಣಗಳಿವೆ. ಅವುಗಳಲ್ಲಿ ಒಂದು, ಜ್ಞಾನೇಶ್ವರ ಮಹಾರಾಜರದು. ಇನ್ನೊಂದು ಶಂಕರಾಚಾರ್ಯರದು. ಇವರೀರ್ವರೂ ನನ್ನ ಮಟ್ಟಿಗೆ ಅತ್ಯಂತ ಪೂಜ್ಯ ಪುರುಷರು. ಅವರ ಮಾತುಗಳು ನನಗೆ ಬಹು ಪ್ರೇರಣೆ ಕೊಟ್ಟವು.

ಅಹಿತದಿಂದ ಪರಾವೃತ್ತ ಮಾಡುವ ಮತ್ತು ಹಿತದಲ್ಲಿ ಪ್ರವೃತ್ತ ಮಾಡುವ ಶ್ರುತಿಗಿಂತಲೂ ದೊಡ್ಡದಾದ ಯಾವುದೇ ಎರಡನೆ ತಾಯಿ ಇಲ್ಲ. ನಾನು ಮಾಡಿಕೊಂಡ ಇದರ ಅರ್ಥವೇನೆಂದರೆ ತಾಯಂದಿರು ಪ್ರೇಮದಿಂದ ತುಂಬಿದವರೆ ಆಗಿರುತ್ತಾರೆ. ಆದರೆ ಪ್ರೇಮದೊಂದಿಗೆ ಜ್ಞಾನದಿಂದಲೂ ತುಂಬಿದ್ದರೆ ಅವಳೆ ತಾರಕವಾಗುತ್ತಾಳೆ.

ಪ್ರೇಮದಿಂದ ತುಂಬಿದ ತಾಯಿ ತಿಳಿದೂ ತಿಳಿದೂ ಅಹಿತ ಮಾಡಲಾರಳು. ಆದರೆ ಪ್ರೇಮ ಮತ್ತು ಜ್ಞಾನ ಈ ಉಭಯ ವಿಧ ಧನದಿಂದ ತುಂಬಿಕೊಂಡ ಶ್ರುತಿಯಂಥ ತಾಯಿ ಬೇರೊಬ್ಬಳಿಲ್ಲ. ಆದ್ದರಿಂದ ನನಗೆ ಬ್ರಹ್ಮನ ಸಾಕ್ಷಾತ್

ಸಂಪರ್ಕವಾಗುವವರೆಗೂ ಶ್ರುತಿಯ ಆಶ್ರಯ ಬಿಡಕೂಡದು.

ಶ್ರುತಿ ಬಗ್ಗೆ ಜ್ಞಾನೇಶ್ವರ ಮಹಾರಾಜರ ಈ ವಾಕ್ಯದಲ್ಲಿರುವಂಥ ಶ್ರದ್ಧೆಯೆ ಶಂಕರಾಚಾರ್ಯರ ವಾಕ್ಯದಲ್ಲಿಯೂ ಇದೆ.

ಮಾತೃ ಪಿತೃ ಸಹಸ್ರೇಭ್ಯೋ ಹಿತೈಷಿ ವೇದ: ಸಹಸ್ರ ಮಾತಾ-ಪಿತರಿಗಿಂತಲೂ ಹೆಚ್ಚಿನ ಹಿತಕರ್ತ ವೇದ. ಅತ್ಯಂತ ಪ್ರಖರ ಜ್ಞಾನಿ, ವೇದಾಂತ ಕೇಸರಿ ಶಂಕರಾಚಾರ್ಯರು ಅತ್ಯಂತ ನಮ್ರರಾಗಿ ವೇದದ ಬಗ್ಗೆ ಇಂತಹ ಆಧಾರವನ್ನು ಕೊಡುತ್ತಾರೆ.

ಈ ಎರಡು ವಾಕ್ಯಗಳೆ ನನಗೆ ವೇದಾಧ್ಯಯನಕ್ಕೆ ಪ್ರೇರಣೆ ಕೊಟ್ಟವು. ಈ ಕೆಲಸ ಕಠಿಣವೆಂಬುದು ನನಗೆ ಗೊತ್ತಿದ್ದುದರಿಂದ ಸಿದ್ಧತೆಯನ್ನೇನೊ ಮಾಡಿಕೊಂಡಿದ್ದೆ. ಉಪನಿಷತ್ತು, ಗೀತೆ, ಸಾಂಖ್ಯ, ಯೋಗಸೂತ್ರ ಬ್ರಹ್ಮಸೂತ್ರದ ಮೇಲೆ ಶಂಕರ ಮತ್ತು ರಾಮಾನುಜರ ಭಾಷ್ಯ ಇತ್ಯಾದಿಗಳ ಅಧ್ಯಯನ ಮಾಡಿದ್ದೆ. ನನ್ನ ಸಂಸ್ಕೃತದ ಅಧ್ಯಯನ ಇಷ್ಟೇ ಆಗಿದ್ದಿತು. ಮರಾಠಿಯಲ್ಲಿ ಎಷ್ಟೊಂದು ಸಂತರ ಸಾಹಿತ್ಯ ಸಿಕ್ಕಿತೋ ಅದೆಲ್ಲವನ್ನೂ ಪರಿಶೀಲಿಸಿದೆ. ಸ್ವಲ್ಪ ಪಾಲಿ ಮತ್ತು ಮಾಗಧಿಯ ಬೌದ್ಧ, ಜೈನ ಸಾಹಿತ್ಯವನ್ನೂ ಕೂಡ ಓದಿದೆ. ಇಷ್ಟೇ ನನ್ನ ಜ್ಞಾನವಿತ್ತು. ಆದರೆ ಮಾತೃ ಮರಣವೇ ನನ್ನ ವೇದಾಧ್ಯಯನಕ್ಕೆ ಸಿದ್ಧತೆಯಾಯಿತು ಎಂದು ನಾನು ಒಪ್ಪಿಕೊಂಡೆ. ಏಕೆಂದರೆ ಮಾತೃ ಮರಣಕ್ಕಿಂತ ಹೆಚ್ಚಿನ ಬೇರಾವ ಸಿದ್ಧತೆಯಿರಲು ಸಾಧ್ಯ?

ಗೀತೆಯ ಮೇಲೆ ನನಗೆ ಅತ್ಯಂತ ಶ್ರದ್ಧೆಯಿದೆ. ನಾನು ಇದನ್ನು ವೇದದ ಸರ್ವೋತ್ತಮ ರೂಪವೆಂದು ತಿಳಿಯುತ್ತೇನೆ. ಅದರಲ್ಲಿ ವೇದಭಗವಂತನು ಒಳ್ಳೆಯ ರೀತಿಯಲ್ಲಿ ಸ್ಪಷ್ಟವಾಗಿ ಪ್ರಕಟವಾಗಿದ್ದಾನೆ. ಇಡೀ ವೇದದ ಸಾರವೇ ಗೀತೆಯಲ್ಲಿ ಬಂದಿದೆ. ನನ್ನ ದೃಷ್ಟಿಯಲ್ಲಿ ಗೀತೆ ವೇದದ ಫಲ ; ವೇದ ಗೀತೆಯ ಬೀಜ, ಬೀಜವನ್ನು ಸಾಮಾನ್ಯವಾಗಿ ಅಗಿಯುವುದಿಲ್ಲ. ಆದಾಗ್ಯೂ ಬಲವಂತವಾಗಿ ಅಗಿದರೆ ರಸ ದೊರೆಯುವುದಿಲ್ಲ. ಬೀಜವನ್ನು ಅಗಿದರೆ ಸಿಹಿ ಗೊತ್ತಾಗುವುದಿಲ್ಲ ಹಣ್ಣು ತಿಂದಾಗಲೇ ರುಚಿ ಗೊತ್ತಾಗುವುದು. ಬೀಜವನ್ನು ಅಗಿಯುವುದರಿಂದ ಯಾವೊಂದು ಪ್ರಕಾರದ ರಸ ಬರುತ್ತದೋ ಅದು ಕೂಡ ಒಂದು ರಸವೇ. ಆ ರೀತಿ ಅಗಿದು ಆ ರಸವನ್ನು ಪ್ರಕಟಗೊಳಿಸುವುದಾದರೆ ಅದೂ ಒಳ್ಳೆಯದೆ. ಅಂಥಹವರೊಂದಿಗೆ ನನ್ನ ಯಾವುದೇ ವಿರೋಧವಿಲ್ಲ.

ಈ ರೀತಿ ಮಾತೃ ಮರಣದ ದಿನದಿಂದ ನಾನು ವೇದಾಧ್ಯಯನ ಆರಂಭಿಸಿದೆ. ಆನಂತರ ಅನೇಕ ಧರ್ಮ ಮತ್ತು ಭಾಷೆಗಳ ಅಧ್ಯಯನ ಮಾಡಿದೆ. ಆ ಧರ್ಮ ಮತ್ತು ಭಾಷೆಗಳಲ್ಲಿ ಸಂತರ ಪಂಥಗಳಿವೆ. ಅವುಗಳ ಪರಿಚಯವಾಯಿತು. ಅವೆಲ್ಲವೂ ವೇದದ ವೇಲೆ ಸ್ವಲ್ಪವಿಲ್ಲ ಸ್ವಲ್ಪ ಬೆಳಕನ್ನು ಚೆಲ್ಲಿವೆ. ಆಗಿನ ಕಾಲದಲ್ಲಿ ವೇದಾಧ್ಯಯನವನ್ನು ಬಹಳ ಏಕಾಗ್ರತೆ, ಶ್ರದ್ಧೆ ಮತ್ತು ನಿಷ್ಠೆಯಿಂದ ಮಾಡಿದ

ಭಾರತೀಯ ವಿದ್ವಾಂಸರಿಗೆ ಬಹಳ ಆಭಾರಿಯಾಗಿದ್ದೇನೆ. ಏಕೆಂದರೆ ಅವರು ವೇದವನ್ನು ಮಾನವ ಕುಲದ ಮೂಲಸ್ರೋತವೆಂದು ಒಪ್ಪಿಕೊಂಡಿದ್ದರು. ಇದಕ್ಕಿಂತಲೂ ಹೆಚ್ಚಿನ ಗೌರವ ವೇದಕ್ಕಿರಲಾರದು. ವೇದವನ್ನು ಯಾರು ವೈದಿಕ ಧರ್ಮ ಅಥವಾ ವರ್ಣಾಶ್ರಮ ಧರ್ಮ ಹಿಂದೂ ಧರ್ಮದ ಮೂಲವೆಂದು ತಿಳಿದರೊ ಅವರು ವೇದವನ್ನು ಬಹಳ ಕಡಿಮೆ ಅರ್ಥ ಮಾಡಿಕೊಂಡಿದ್ದಾರೆ. ವೇದವು ಬೀಜ ಹಾಗೂ ಮೂಲ ಇದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಇದಿಷ್ಟೇ ಅದರ ಸಂತತಿ ಅಲ್ಲ. ಇಡೀ ವಿಶ್ವವೇ ವೇದ ಸಂತತಿ. ಆದ್ದರಿಂದ ವೇದದಲ್ಲಿ ವಿಶ್ವಮಾನುಷ ಎಂಬ ಶಬ್ದ ಬಂದಿದೆ. ಇಡೀ ವಿಶ್ವ ಮಾನವನ ಸೇವೆಗಾಗಿ ವೇದ ಪ್ರವೃತ್ತವಾಗಿದೆ. ಆದ್ದರಿಂದ ಭಾರತೀಯರಲ್ಲದ ವಿದ್ವಾಂಸರೂ ಮಾನವ ಸಂಸ್ಕೃತಿಯ ಮೂಲದ ಸಂಶೋಧನೆಯನ್ನು ವೇದದಲ್ಲಿ ಮಾಡುತ್ತಾ ಹೋಗುತ್ತಾರೆ. ವೇದದ ವಿಷಯವಾಗಿ ಅವರು ಬಹಳ ಪರಿಶ್ರಮ ಮಾಡಿದ್ದಾರೆ. ಅದರಲ್ಲಿ ಎಷ್ಟನ್ನು ನಾನು ನೋಡಬಹುದಾಗಿತ್ತೊ ಅಷ್ಟನ್ನೂ ನೋಡಿದೆ.

ಜೊತೆಗೆ ನಮ್ಮಲ್ಲಿ ಕೂಡ ಯಾಸ್ಕಾಚಾರ್ಯ, ಸಾಯಣಚಾರ್ಯ ಮುಂತಾದವರು ವೇದದ ಸಂಬಂಧವಾಗಿ ಯಾವ ಪ್ರಯತ್ನವನ್ನು ಮಾಡಿದ್ದಾರೊ ಅದನ್ನು ಕೂಡ ಪರಿಶೀಲಿಸಿದೆ. ವೇದಾಧ್ಯಯನವನ್ನು ಪ್ರಾರಂಭಿಸಿದ ಕೂಡಲೆ ಮ್ಯೂಕ್ಸ್‌ಮುಲ್ಲರ್‌ರು ಸಾಯಣಭಾಷ್ಯದೊಂದಿಗೆ ರಚಿಸಿದ ಋಗ್ವೇದದ ಉತ್ತಮ ಆವೃತ್ತಿಯೂ ಸಿಕ್ಕಿತು. ಬೇರೆ ಇನ್ನಾವುದು ಇಷ್ಟು ಒಳ್ಳೆಯದು ಸಿಕ್ಕಲಿಲ್ಲ. ಇತ್ತೀಚೆಗೆ ಪುಣೆಯ ತಿಲಕ್ ವಿದ್ಯಾಪೀಠವು ನಾರಾಯಣ ಭಾಷ್ಯದೊಂದಿಗೆ ಋಗ್ವೇದದ ಒಳ್ಳೆಯ ಗ್ರಂಥವನ್ನು ಪ್ರಕಟಿಸಿದೆ. ಆದರೆ ಆ ಕಾಲದಲ್ಲಿ ಮ್ಯೂಕ್ಸ್‌ಮುಲ್ಲರನದೇ ಎಲ್ಲಕ್ಕಿಂತ ಹೆಚ್ಚು ಉತ್ತಮವಾದ ಆವೃತಿಯಾಗಿತ್ತು. ಅದರಲ್ಲಿ ಬಹಳ ಕಡಿಮೆ ತಪ್ಪುಗಳಿದ್ದವು. ಉತ್ತಮ ಮುದ್ರಣ; ಸಸ್ವರ , ಶುದ್ಧ ಸ್ವರದೊಂದಿಗೆ ಉಚ್ಚಾರಣೆ ಇತ್ತು. ವೇದದ ಒಳ್ಳೆಯ ಅಧ್ಯಯನ ಜರ್ಮನಿ, ರಷ್ಯಾ, ಫ್ರಾನ್ಸ್ ಮತ್ತು ಇಂಗ್ಲೆಂಡಿನಲ್ಲಿ ಕೂಡ ಆಗಿದೆ. ಕೇವಲ ಋಗ್ವೇದವನ್ನಷ್ಟೆ ಅಲ್ಲ ವೇದಗಳ ಎಲ್ಲ ಮಂತ್ರಗಳ ಸೂಚಿಯನ್ನು ಮತ್ತು ಸಂಗ್ರಹವನ್ನು ಟ್ರೂಮ್‌ಫೀಲ್ಡ್ ಎಂಬ ಲೇಖಕ ಬಹು ಒಳ್ಳೆಯ ರೀತಿಯಲ್ಲಿ ಮಾಡಿದ್ದಾನೆ. ಅದಕ್ಕೆ ಸಮನಾದ ಬೇರೊಂದು ಗ್ರಂಥ ಸಿಗುವುದಿಲ್ಲ. ಇಂಥದೇ ಇನ್ನೂ ಹಲವಾರು ಗ್ರಂಥಗಳ ಹೆಸರನ್ನು ಹೇಳಬಹುದು. ಈ ಎಲ್ಲ ಗ್ರಂಥಗಳನ್ನು ಹತ್ತಿರವಿಟ್ಟುಕೊಂಡು ಅವುಗಳ ಆಧಾರದ ಮೇಲೆ ಋಗ್ವೇದದ ಅಧ್ಯಯನ ಮಾಡಿದೆ. ಗೀತೆ ಮತ್ತು ಉಪನಿಷತ್ತಿನ ಹೊರತಾಗಿ ನನ್ನ ಹೆಚ್ಚಿನ ಅಧ್ಯಯನ ವೇದ ಕುರಿತಾಗಿದೆ. ಹಿಂದುಸ್ಥಾನದ ಸಾಹಿತ್ಯದಲ್ಲಿ ಎಲ್ಲಕ್ಕಿಂತ ಹೆಚ್ಚಿನ ಪ್ರಭಾವ ನನ್ನ ಮೇಲೆ ವೇದ-ವೇದಾಂತ ಮತ್ತು ಗೀತೆಯದು ಇದೆ. ಈ ಬಗ್ಗೆ ಒಂದು ಶ್ಲೋಕವನ್ನು ನಾನು ರಚಿಸಿದ್ದೇನೆ.

ವೇದ-ವೇದಾಂತ ಗೀತಾನಾಂ ಸಾರ ಉಧೃತಃ

ಬ್ರಹ್ಮ ಸತ್ಯಂ ಜಗತ್ ಸ್ಫೂರ್ತಿಃ ಜೀವನಂ-ಸತ್ಯ ಶೋಧನಂ

ನಾಲ್ಕೂ ವೇದಗಳ ಅಧ್ಯಯನ ಮಾಡುವ ಅವಕಾಶ ನನಗೆ ಸಿಕ್ಕಿದರೂ ಕೂಡ ನಾನು ಆಳವಾಗಿ ಋಗ್ವೇದವನ್ನೇ ಪರಿಶೀಲಿಸಿದ್ದೇನೆ ಹಾಗೂ ಅದನ್ನೇ ಮೂಲವೆಂದೂ ತಿಳಿಯುತ್ತೇನೆ. ನನ್ನ ಜೀವನದ ಪ್ರಾರಂಭಿಕ ದಿನಗಳಲ್ಲಿ ನನ್ನ ಮೇಲೆ ಮಹಾರಾಷ್ಟ್ರದ ಐದು ಸಂತರ ಪ್ರಭಾವವಿತ್ತು. ನಂತರದ ವಯಸ್ಸಿನಲ್ಲಿ ವೇದದ ಮುಖ್ಯ ಪ್ರಭಾವವಿತ್ತು. ವೇದಾಧ್ಯಯನ ಮಾಡುವ ಸಮಯದಲ್ಲಂತೂ ನನಗೆ ದೇಹದ ಪರಿವೆಯೇ ಇರಲಿಲ್ಲ. ಕೇವಲ ನನ್ನ ಶವ ಮಾತ್ರ ಇದೆ ಎಂಬ ಅನುಭವವಾಗುತ್ತಿತ್ತು!

ವೇದ ನಿತ್ಯಂ ಅಧಿಯೂತಂ – ವೇದದ ಅಧ್ಯಯನ ಪ್ರತಿ ದಿನವೂ ನಡೆಯಬೇಕು. ನಾನು ವೇದದ ಅಧ್ಯಯನವನ್ನು ಪ್ರತಿದಿನ ಮಾಡಿದ್ದೇನೆಂದಲ್ಲ, ಆದರೆ ೧೯೧೮ ರಿಂದ ೧೯೬೪ ರವರೆಗೆ ಮತ್ತು ಅದರ ನಂತರವೂ ಸತತವಾಗಿ ನನ್ನ ವೇದಾಧ್ಯಯನ ನಡೆಯುತ್ತಲೆ ಇತ್ತು. ವೇದ ಪುರಾತನ ಬೀಜ. ಆದ್ದರಿಂದ ವರ್ಷಾನುಗಟ್ಟಲೆ ಒಂದೊಂದು ಶಬ್ದದ ಹಿಂದೆ ಹೋಗಬೇಕಾಯಿತು. ಎರಡು ರೀತಿಯಲ್ಲಿ ಹುಡುಕಾಟ ನಡೆಯುತ್ತಿತ್ತು. ಒಂದಂತೂ ಜೀವನದ ಸ್ವರೂಪ ಚಿಂತನೆಯಕುರಿತಾಗಿ. ಎರಡನೆಯದು ಗೀತೆಯ ಪ್ರಾರಂಭ ಮತ್ತು ನಂತರದ ವಿಚಾರ ಪರಿಚಯ ಕುರಿತಾಗಿ. ಮುಂದಿನದು ಸುಲಭವಾಗಿತ್ತು. ಪ್ರಾರಂಭದ ವೇದಪ್ರವಾಹದ ಅಧ್ಯಯನ ಮಾತ್ರ ಕಠಿಣ ಕೆಲಸವಾಗಿತ್ತು. ಆದರೆ ಬಹಳ ಬಲವತ್ತರವಾದ ಪ್ರೇರಣೆ ನನಗಿತ್ತು. ಆದ್ದರಿಂದ ಅಧ್ಯಯನ ಮಾಡಿ ಮುಗಿಸಿದೆ. ಕೊನೆಯಲ್ಲಿ ಅಧ್ಯಯನ ವೇದಗಳಲ್ಲಿ ಸಿಕ್ಕಿಕೊಂಡಿತು. ಬಹಳ ಗೂಢ ಭಾಷೆ ಅದಾಗಿತ್ತು. ಪ್ರಾಚೀನ ಶಬ್ದಗಳಿದ್ದವು. ಯಾವ ಸಮಯದಲ್ಲಿ ಶಬ್ದಗಳು ಸ್ವತಃ ರೂಪಿತಗೊಳ್ಳುತ್ತಿದ್ದವೊ ಆ ಸಮಯದ ಭಾಷೆ! ಅಂದರೆ ಶಬ್ದಗಳ ಮೂಲಾರ್ಥಕ್ಕೆ ಹೋಗಿ ಹುಡುಕಾಟ ಮಾಡಬೇಕಿತ್ತು. ಪರಿಣಾಮ ಬಹಳಷ್ಟು ಸಮಯ ಬೇಕಾಯಿತು. ಆದರೆ ಆ ಪರಿಶ್ರಮದ ಲಾಭವಂತೂ ಆಯಿತು. ವೇದದ ಬಗ್ಗೆ ನನಗೆ ಶ್ರದ್ಧೆಯಿದೆ, ವೇದಾಧ್ಯಯನ ಮಾಡುತ್ತೇನೆ ಇದೆಲ್ಲವೂ ಸರಿ. ಆದರೆ ನನ್ನ ಆಚರಣೆಯಿಂದ ಪ್ರಪಂಚದಲ್ಲಿ ವೇದಗಳ ಬಗ್ಗೆ ತಿರಸ್ಕಾರವುಂಟಾದರೆ ನನ್ನನ್ನು ನಾನು ವೇದಾಭ್ಯಾಸಿ ಎಂದು ಹೇಳಿಕೊಂಡೂ ವೇದದ ಮಹತ್ವವನ್ನು ಕಡಿಮೆ ಮಾಡಿದಂತಾಗುತ್ತದೆ. ನನ್ನ ಆಚರಣೆ ಸ್ವತಃ ವೇದದಷ್ಟೆ ಪವಿತ್ರವಿದೆ ಎಂದು ಹೇಳವಂತಿರಬೇಕು. ನಮ್ಮ ಆಚರಣೆಯಿಂದ ನಮ್ಮ ಸ್ವಾಧ್ಯಾಯದ ಮಹತ್ವ ನಿರ್ಣಯಗೊಳ್ಳುತ್ತದೆ. ಒಮ್ಮೆ ನಾನು ಎರಡು ವರ್ಷ ಏಕಾಗ್ರತೆಯಿಂದ ವೇದಾಧ್ಯಯನ ಮಾಡಿದಾಗ ಹಾಲು-ಅನ್ನದ ಮೇಲೆ ಮಾತ್ರ ಜೀವಿಸುತ್ತಿದ್ದೆ. ಹಾಲು-ಅನ್ನವಲ್ಲದೆ ಬೇರೆ ಇನ್ನಾವ ಪದಾರ್ಥವನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಹೀಗೆ ವಿಚಾರಗಳ ಜೊತೆಗೆ ಜೀವನದ ಸಂಬಂಧವನ್ನೂ ಜೋಡಿಸುವುದು ನನ್ನ ರೂಢಿ. ಅದನ್ನು ನಾನು ಬಹಳ

ಅವಶ್ಯವೆಂದೂ ತಿಳಿಯುತ್ತೇನೆ. ಹೀಗೆ ಐವತ್ತು ವರ್ಷಗಳ ಕಾಲ ವೇದಾಧ್ಯಯನ ಮಾಡಿದೆ. ಆಮೇಲೆ ನಾಲ್ಕು- ನಾಲ್ಕುವರೆ ಸಾವಿರ ಮಂತ್ರಗಳು ಬಾಯಿಪಾಠವಾದವು. ಅವುಗಳಿಂದ ೧೩೯೯ ಮಂತ್ರಗಳನ್ನು ಆಯ್ಕೆ ಮಾಡಿಕೊಂಡೆ. ಇದರ ಅರ್ಥ ನಾನು ವೇದವನ್ನು ಸಂಕ್ಷಿಪ್ತಗೊಳಿಸಿದೆ. ವೇದದಲ್ಲಿ ೧೦,೫೫೮ ಮಂತ್ರಗಳಿವೆ. ನಾನು ಅವುಗಳನ್ನು ೧/೮ ಅಂಶಕ್ಕೆ ಇಳಿಸಿದೆ ೮ ನೆಯ ೧ ಅಂಶಕ್ಕೆ ಆಯುರ್ವೇದದಲ್ಲಿ 'ಖ್ವಾತ್' ಎಂಬ ಶಬ್ಧವಿದೆ. 'ಖ್ವಾತ್' ಎಂದರೆ ಕಷಾಯ. ಕೆಲವೊಮ್ಮೆ ೧/೧೬ ಅಂಶದ ಕಷಾಯವಿರುತ್ತದೆ. ನಾನು ೧/೮ರ ಅಂಶ ಮಾಡಿದೆ. ೧೩೯೯ಮಂತ್ರಗಳನ್ನು ಆಯ್ಕೆ ಮಾಡಿದೆ. ಇದು ಬೆಸಸಂಖ್ಯೆ. ಒಟ್ಟು ವೇದದ ೧/೮ಅಂಶವನ್ನು ಪ್ರತ್ಯೇಕಿಸಿ 'ಋಗ್ವೇದ ಸಾರಃ' ಪ್ರಕಟಗೊಳಿಸಿದೆ. ಇದರ ಉದ್ದೇಶವು ಓದುವುದಕ್ಕೆ ಸುಲಭವಾಗಬೇಕೆಂಬುದು. ೫೦ ವರ್ಷಗಳ ಅಧ್ಯಯನದ ಫಲ ಸ್ವರೂಪವಾಗಿ 'ಋಗ್ವೇದ ಸಾರಃ' ಇದೆ. ಕಾರಾಗೃಹದಲ್ಲಿದ್ದಾಗ ವೇದಕಾಲದಿಂದ ಹಿಡಿದು ಇಂದಿನವರೆಗೆ ಭಾರತದ ಇತಿಹಾಸದಲ್ಲಿ ಯಾವ ಯಾವ ವ್ಯಕ್ತಿಗಳು ಕ್ರಾಂತಿಯನ್ನು ಮಾಡಿದರೊ ಅದರ ಬಗ್ಗೆ ವಿಚಾರ ಮಾಡಿದೆ. ಆ ಕುರಿತು ಸ್ವಲ್ಪ ಬರೆಯಲೂ ಪ್ರಾರಂಭಿಸಿದೆ. ಪರಶುರಾಮ ಮತ್ತು ಗೃಧ್ಯಮರನ್ನು ಕುರಿತು ಬರೆದೆ. ಅಷ್ಟರೊಳಗಾಗಿ ನನ್ನ ಬಿಡುಗಡೆಯಾಯಿತು.

ಬಿಬೇದ್‌ತೆಲ್ಪ ಸ್ರುತಾತ್ ವೇದೊ ಮಾಮಯಂ ಪ್ರಹರಿಶ್ಯತಿ ಅಂದರೆ ಅಲ್ಪಶೃತನಾದ ಮನುಷ್ಯ ವೇದ ಚರ್ಚೆಯನ್ನು ಮಾಡಿದರೆ ವೇದಭಗವಂತನಿಗೆ ಭಯವಾಗುತ್ತದೆ ಎಂಬ ವಚನವೊಂದಿದೆ. ವೇದ ಭಗವಂತ ನನ್ನಂಥ ಅಲ್ಪ ಶೃತ ಮನುಷ್ಯನ ಬಗ್ಗೆ ಭಯಪಡಬೇಕಾಗಿಲ್ಲ. ಏಕೆಂದರೆ ನಾನು ವೇದವತ್ಸ, ವೇದದ ಮಗು , ವೇದಗಳ ಓರ್ವ ನಮ್ರ ಭಕ್ತ ಮತ್ತು ಉಪಾಸಕ. ವೇದದ ಮಗು ನಾನಾಗಿರುವುದರಿಂದ ವೇದಭಗವಂತನು ನನ್ನೆಲ್ಲ ಚರ್ಚೆಯನ್ನು ತಂದೆ ತಾಯಂದಿರು ಮಕ್ಕಳ ಮಾತುಗಳನ್ನು ಕೇಳಿ ಸಂತೋಷ ಪಡುವ ತಂದೆ ತಾಯಂದಿರ ಹಾಗೆಯೇ ವೇದ ಭಗವಂತನು ನನ್ನ ಚರ್ಚೆಯನ್ನು ಕೇಳುವನು.

(ಸಶೇಷ) (ಅನು. ಸುಕೌ)

ಸನ್ಮಾನ್ಯರಿಂದ

ತಾವು ಪ್ರಕಟಿಸುತ್ತಿರುವ 'ಜನಪದ ವಿಚಾರ' ಪತ್ರಿಕೆಯಲ್ಲಿಯ ಗಾಂಧಿ ವಿಚಾರಗಳು, 'ಸಮ್ಮಿಶ್ರ ಸರ್ಕಾರ ಮತ್ತು ಮತದಾರ' ಲೇಖನಗಳು ಹಿಡಿಸಿದವು. ಇಂದಿನ ಗೊಂದಲಮಯ ಜೀವನದಲ್ಲಿ ಸುಗಮ ದಾರಿಗೆ ಗಾಂಧೀ ಮಾರ್ಗವೇ ಸೂಕ್ತವೆಂಬ ತಮ್ಮ ಅಭಿಪ್ರಾಯ ಮನನಯೋಗ್ಯ. ಪತ್ರಿಕೆ ಚೆನ್ನಾಗಿದೆ.

-ಕೇಶವ ಉಮರ್ಜಿ, ಹುನ್ನೂರು.

ಜನಪದ ನಿಲಯದ ಅಂತರಂಗದಲ್ಲಿ........೩೫



ಬಡವರ ಮತ್ತು ತುಳಿಯಲ್ಪಟ್ಟವರ ಸೇವೆಯಲ್ಲಿ ಗರಿಷ್ಠ ಪ್ರಮಾಣದ ಮಿತವ್ಯಯ ಅತ್ಯಗತ್ಯ. ಏಕೆಂದರೆ ಅಂಥವರ ಸಹಾಯದಲ್ಲಿ ತೊಡಗಿರುವಂಥವರ ದುಂದುಗಾರಿಕೆ, ಅದು ಅಪ್ರಜ್ಞಾಪೂರ್ಣವಾಗಿದ್ದರೂ ಕೂಡ ಸಹಾಯ ಪಡೆಯುವಂಥವರು ಆ ದುಂದುಗಾರಿಕೆಯನ್ನು ನಿಯಂತ್ರಿಸಲಾರರು. ಆ ಸೇವಕರು ಎಷ್ಟೇ ದಯಾವಂತರು ಆಗಿದ್ದಿರಬಹುದು ಆಗ ತಮ್ಮ ಅಪ್ರಜ್ಞಾಯುತ ದುಂದುಗಾರಿಕೆಯ ಮೇಲೆ, ಅದು ಎಷ್ಟೇ ಉತ್ತಮ ವ್ಯವಸ್ಥೆಯ ಹೆಸರಿನಲ್ಲಿದ್ದರೂ ಕೂಡ ಅವರು ಅಗತ್ಯಕ್ಕಿಂತ ಹೆಚ್ಚು ಖರ್ಚು ಮಾಡುವ ಸಂಭವವಿರುತ್ತದೆ. ಅನೇಕ ಸಮಾಜ ಸೇವಾ ಸಂಸ್ಥೆಗಳನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸಿದಾಗ ತೀವ್ರ ಸಂಕಟಮಯವಾದ ದುಂದುಗಾರಿಕೆ ಅಥವಾ ಅವ್ಯವಸ್ಥೆಯ ಪರಮಾವಧಿ ಇರುವುದು ಕಂಡು ಬರುತ್ತದೆ. ಹಾಗೂ ವಿಶ್ವಸ್ಥರ ವಿಶ್ವಾಸದ ದ್ರೋಹವಾಗುವಷ್ಟರ ಮಟ್ಟಿಗೆ ಇರುತ್ತದೆ. ತಮ್ಮ ಸೇವೆಯ ಉದ್ದೇಶ ನೆರವಾಗಬೇಕಾದರೆ ಇಂಥ ದೋಷಗಳ ನಿವಾರಣೆಯಾಗಬೇಕು.

–ಗಾಂಧಿ (ಹರಿಜನ–೫–೧–೧೯೩೫)

ಟ್ರಸ್ಟಿನ ಸ್ಥಾಪನೆಯಾದಾಗಿನಿಂದಲೂ ಅದರ ಯಾವುದೇ ಕಾರ್ಯಕ್ರಮದ ಬಗ್ಗೆ ಪತ್ರಿಕೆಗಳಲ್ಲಿ ಪ್ರಚಾರಪಡಿಸುವ ಅಭ್ಯಾಸವನ್ನು ಬೆಳೆಸಿಕೊಂಡು ಬರಲಿಲ್ಲ. ಯಾವ ರೀತಿ ಸರ್ಕಾರದ ಸಹಾಯವನ್ನು ಪಡೆಯಬಾರದೆಂಬ ನೀತಿಯನ್ನು ಇಟ್ಟುಕೊಳ್ಳಲಾಗಿತ್ತೋ ಅದೇ ರೀತಿ ಪ್ರಚಾರವನ್ನು ಸಹ ದೂರವಾಗಿಡಬೇಕೆಂಬ ನೀತಿಯನ್ನು ಅನುಸರಿಸಿಕೊಂಡು ಬರಲಾಯಿತು. ಇಷ್ಟೇ ಅಲ್ಲ ಮಂತ್ರಿಗಳನ್ನಾಗಲಿ, ಅಧಿಕಾರಿಗಳನ್ನಾಗಲಿ, ರಾಜಕಾರಣಿಗಳನ್ನಾಗಲಿ ಆಹ್ವಾನಿಸುವ ಪರಿಪಾಠವನ್ನೂ ಇಟ್ಟುಕೊಳ್ಳಲಿಲ್ಲ. ಸಂಸ್ಥೆಯಲ್ಲಿ ಮತ್ತು ಅದರ ಕಾರ್ಯಕ್ರಮದಲ್ಲಿ ಸತ್ವವಿರಬೇಕೇ ಹೊರತು ಪ್ರಚಾರದ ಕೃತಕ ಉಸಿರಾಟದಿಂದ ಸಂಸ್ಥೆ ಬದುಕಬಾರದೆಂಬುದು ಈ ಎಲ್ಲ ನೀತಿಗಳ ಹಿಂದೆ ಇದ್ದ ಭಾವನೆ ಕಾರಣವಾಗಿದ್ದಿತು. ಆದರೆ ಈ ಭಾವನೆ ಬಲಗೊಳ್ಳುವ ಮೊದಲೆ ಟ್ರಸ್ಟಿನ ಕೆಲ ಕಾರ್ಯಕ್ರಮಗಳು ಪ್ರಾರಂಭವಾದ ಸಂದರ್ಭದಲ್ಲಿ ಕೆಲ ರಾಜಕೀಯ ಪ್ರಮುಖರನ್ನು, ಅಧಿಕಾರಿಗಳನ್ನು ಆಹ್ವಾನಿಸಿದ್ದುಂಟು. ಆದರೆ ಕಾಲ ಕ್ರಮೇಣ ಈ ಪದ್ಧತಿ ನಿಂತು ಹೋಯಿತು. ಅಂಗವಿಕಲರಿಗಾಗಿ ಗ್ರಾಮಾಂತರ ಪ್ರದೇಶದಲ್ಲಿ ಪ್ರಾರಂಭಿಸಿದ ಕಾರ್ಯಕ್ರಮ 'ಕರುಣಾಗೃಹ' ವಾಗಿದ್ದಿತು. ಇದೊಂದು ವಿಶೇಷವಾದ ಕಾರ್ಯಕ್ರಮವೆಂಬ ವ್ಯಾಮೋಹಕ್ಕೆ ಒಳಗಾಗಿ ಆಗ ಮೈಸೂರು

ರಾಜ್ಯದ ಮುಖ್ಯಮಂತ್ರಿಯಾಗಿದ್ದ ಶ್ರೀ ಎಸ್. ಆರ್ ಕಂಠಿಯವರನ್ನು ಕರುಣಾಗೃಹದ ಉದ್ಘಾಟನೆಗೆ ಆಹ್ವಾನಿಸಿದ್ದೆವು. ಅವರನ್ನು ಆಹ್ವಾನಿಸುವುದು ಒಂದು ಕಾರಣದಿಂದ ಸುಲಭವಾಗಿದ್ದಿತು. ಕರುಣಾಗೃಹ ಪ್ರಾರಂಭವಾದ ಸಮಯಕ್ಕೆ ಮೇಲುಕೋಟೆಯಲ್ಲಿ ಒಂದು ಹೊಸ ಶಿಶುವಿಹಾರವನ್ನು ಕೆಲ ಮಿತ್ರರು ಪ್ರಾರಂಭಿಸಿದ್ದರು. ಅವರು ಆ ಶಿಶುವಿಹಾರದ ಉದ್ಘಾಟನೆಗೆ ಮುಖ್ಯಮಂತ್ರಿ ಕಂಠಿಯವರನ್ನು ಆಹ್ವಾನಿಸಿದ್ದರು. ಮೇಲುಕೋಟೆಗೆ ಮುಖ್ಯಮಂತ್ರಿಯವರ ಭೇಟಿಯ ಸಂದರ್ಭವನ್ನು ಉಪಯೋಗಿಸಿಕೊಂಡು ಕರುಣಾಗೃಹವನ್ನೂ ಉದ್ಘಾಟಿಸಿಕೊಳ್ಳುವ ಯೋಚನೆಯನ್ನು ಮಾಡಿದೆ. ಆ ಪ್ರಕಾರವಾಗಿ ಅವರ ಕಛೇರಿಯೊಂದಿಗೆ ಸಂಪರ್ಕಿಸಿ ಕಂಠಿಯವರು ೧೯೬೩ ಅಕ್ಟೋಬರ್ ೨ ರಂದು ಉದ್ಘಾಟನೆ ಮಾಡುವ ದಿನವನ್ನು ಗೊತ್ತುಮಾಡಲಾಯಿತು. ಆಗಿನ್ನು ಕರುಣಾಗೃಹ ಅದೇ ಹಳೆಯ ಸಾಮಾನ್ಯವಾದ ಮನೆಯಲ್ಲಿತ್ತು. ಕರುಣಾಗೃಹ ಪ್ರಾರಂಭವಾಗುವ ವರ್ಷದಲ್ಲಿಯೆ ಕೆಲವು ತಿಂಗಳುಗಳು ಮೊದಲು ಕೇಂದ್ರ ಸಮಾಜ ಕಲ್ಯಾಣ ಮಂಡಳಿಯ ಯೋಜನೆಯಾದ ವಯಸ್ಕರ ಮಹಿಳೆಯರಿಗೆ ಸಂಕ್ಷಿಪ್ತ ಶಿಕ್ಷಣ ಶಾಲೆ ಎಂಬ ಯೋಜನೆಯಡಿ ೨೫ ಮಹಿಳೆಯರಿಗಾಗಿ ಶಾಲೆಯನ್ನು ಪ್ರಾರಂಭಿಸಲಾಗಿತ್ತು. ಅವರೆಲ್ಲರಿಗೂ ಕರುಣಾಗೃಹದ ಮನೆಯ ಪಕ್ಕದಲ್ಲಿದ್ದ ಇನ್ನೊಂದು ಹಳೆಯ ತೊಟ್ಟಿಮನೆಯಲ್ಲಿ ವಾಸದ ಮತ್ತು ಪಾಠದ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಕಂಠಿಯವರು ಕರುಣಾಗೃಹದ ಉದ್ಘಾಟನೆಗೆ ಬರುವ ದಿನ ಆ ಮಹಿಳೆಯರೆಲ್ಲರು ಸೇರಿ ಕರುಣಾಗೃಹವನ್ನು ಸಾರಿಸಿ ರಂಗವಲ್ಲಿ ಇಟ್ಟು, ಬಾಗಿಲಿಗೆ ತೋರಣ ಕಟ್ಟಿ ದೀಪಾಲೆ ಕಂಬವನ್ನು ಮಧ್ಯದಲ್ಲಿರಿಸಿ ಉದ್ಘಾಟನೆಗೆ ವ್ಯವಸ್ಥೆ ಮಾಡಿದ್ದರು. ಕಂಠಿಯವರನ್ನು ವಾದ್ಯ ಸಮೇತ ಕರುಣಾಗೃಹದ ಮನೆಗೆ ಕರೆದುಕೊಂಡು ಬಂದು ದೀಪವನ್ನು ಬೆಳಗಿಸುವುದರ ಮೂಲಕ ಉದ್ಘಾಟನೆಯನ್ನು ಮಾಡಿಸಲಾಯಿತು. ಉದ್ಘಾಟನೆಯ ನಂತರ ಕಂಠಿಯವರು ಮಕ್ಕಳಿಗೆಲ್ಲ ಸಿಹಿ ಹಂಚಿದರು. ನಂತರ ಪಕ್ಕದ ಮೈದಾನದಲ್ಲಿ ಒಂದು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಆ ಸಭೆಯಲ್ಲಿ ಗ್ರಾಮದ ಕೆಲ ಜನರೊಂದಿಗೆ ವಯಸ್ಕರ ಶಿಕ್ಷಣದ ಮಹಿಳೆಯರೂ ಸೇರಿಕೊಂಡಿದ್ದರಿಂದ ಸಭೆಯು ತುಂಬಿದಂತೆ ಇತ್ತು. ಇದೆಲ್ಲವೂ ಬಹಳ ಪ್ರಮುಖವಾದ ಕಾರ್ಯಕ್ರಮವಾಗಿದ್ದರೂ ಎಲ್ಲವನ್ನೂ ದಾಖಲಿಸಿಕೊಳ್ಳಬೇಕೆಂಬ ಮನೋಭಾವ ಆಗ ಇಲ್ಲದೆ ಇದ್ದುದರಿಂದ ಆ ಸಮಾರಂಭದಲ್ಲಿಯ ಮುಖ್ಯಮಂತ್ರಿ ಕಂಠಿಯವರ ಭಾಷಣದ ದಾಖಲೆಯಾಗಲಿ, ಆ ಸಮಾರಂಭದ ಛಾಯಾಚಿತ್ರವಾಗಲಿ ಇರುವುದಿಲ್ಲ. ಟೇಪ್‌ರೇಕಾರ್ಡರ್ ಇತ್ಯಾದಿ ಇರಲಿಲ್ಲ. ವಿದ್ಯುತ್ ಸಂಪರ್ಕವಿರಲಿಲ್ಲ. ಹೀಗಾಗಿ ಮುಂದಿನ ವರ್ಷಗಳಲ್ಲಿ ಅತ್ಯಂತ ಪ್ರಮುಖ ಸಮಾಜ ಕಲ್ಯಾಣ ಚಟುವಟಿಕೆಯೊಂದು ಸೇವಾ ಸಂಸ್ಥೆಗಳಿಂದಲೂ, ಸರ್ಕಾರಗಳಿಂದಲೂ ಗುರ್ತಿಸಲ್ಪಟ್ಟ ಟ್ರಸ್ಟಿನ ಅಂಗವಿಕಲ ಸೇವೆಯ ಪ್ರಾರಂಭೋತ್ಸವ ಕಾಲಗತಿಯಲ್ಲಿ ಲೀನವಾಯಿತು. ಆದರೆ ಕರುಣಾಗೃಹದಲ್ಲಿದ್ದ ಆಗಿನ ವಿದ್ಯಾರ್ಥಿಗಳು ನಾಲ್ಕು ದಶಕಗಳ ನಂತರವೂ ಕರುಣಾಗೃಹದ ಅಂತಃಸತ್ವ ಉಳಿದುಕೊಂಡು

ಬಂದುದಕ್ಕೆ ಸಾಕ್ಷಿಯಾಗಿದ್ದಾರೆ.

ಕರುಣಾಗೃಹದಂಥ ಸಾಮಾಜಿಕ ಕಾರ್ಯವನ್ನು ಪ್ರಾರಂಭಿಸಿದಾಗ ಆಗಿನ ಗ್ರಾಮಸ್ಥರಲ್ಲಿ ಯಾವ ವಿಶೇಷವಾದ ಮಹತ್ ಸಂಗತಿಯ ಅನುಭವವಾದಂತೆ ತೋರಲಿಲ್ಲ. ಗ್ರಾಮಸ್ಥರು ಒಂದು ರೀತಿಯಲ್ಲಿ ದೂರದ ಪ್ರೇಕ್ಷಕರಾಗಿ ಇದ್ದರು. ಇಂಥದೇ ಒಂದು ಕಾರ್ಯಕ್ರಮ ಸಾಮಾಜಿಕ ಸ್ಪಂದನ ಇರುವಂಥ ಗ್ರಾಮದಲ್ಲಾಗಲಿ ಅಥವಾ ಒಂದು ಪಟ್ಟಣ ಪ್ರದೇಶದಲ್ಲಾಗಲೀ ಆಗಿದ್ದರೆ ಏನೆಲ್ಲ ಉತ್ತೇಜನಕಾರಿಯಾದ ಪ್ರತಿಕ್ರಿಯೆಗಳು ಬರುತ್ತಿದ್ದವೊ? ಬಹುಶಃ ಸಾರ್ವಜನಿಕ ಜೀವನದ ಬಗ್ಗೆ ನಮ್ಮ ಜನರು ಅಷ್ಟೊಂದು ಉತ್ಸಾಹ ತೋರದೆ ಇರುವುದು ಅವರ ಸ್ವಭಾವವೇ ಆಗಿದೆ ಎಂದೆನಿಸುತ್ತದೆ. ಸ್ವಾತಂತ್ರ್ಯ ಚಳುವಳಿಯ ಮೊದಲಿನ ಕಾಲವೊಂದನ್ನು ಬಿಟ್ಟರೆ ಆನಂತರ ಅಂದರೆ ಸ್ವಾತಂತ್ರ್ಯ ಬಂದಾದ ನಂತರ ಗ್ರಾಮೀಣ ಪ್ರದೇಶದಲ್ಲಿ ಸಾರ್ವಜನಿಕ ಜೀವನ ಅಥವ ಕಾರ್ಯಕ್ರಮದ ಬಗ್ಗೆ ಪ್ರೋತ್ಸಾಹದಾಯಕ ಆಸಕ್ತಿ ಕಾಣಬರುತ್ತಿಲ್ಲ. ಇದಕ್ಕೆ ನಿರಕ್ಷರತೆ, ಅಜ್ಞಾನ, ಬಡತನ, ಜಾತೀಯತೆ ಇತ್ಯಾದಿಗಳು ಕಾರಣವಾಗಿರಬಹುದು. ಖೇದದ ಸಂಗತಿಯೆಂದರೆ ಯುವಕರಲ್ಲಿ ಕೂಡ ಒಂದು ಪ್ರಕಾರದ "ಅನಾಸಕ್ತಿ ಯೋಗ" ಇದೆ. ಅಂತೂ ಸಾಮಾಜಿಕ ಮೌಲ್ಯವಿರುವ ಮತ್ತು ಅಗತ್ಯವಿರುವಂಥ ಕಾರ್ಯಕ್ರಮವೊಂದನ್ನು ಪ್ರಾರಂಭಿಸಲಾಯಿತು.

ಸಂಕ್ಷಿಪ್ತ ಶಿಕ್ಷಣ ಶಾಲೆ ಎಂದರೆ ಸಾಮಾಜಿಕ ಕಾರಣಗಳಿಂದಾಗಿ ವಿದ್ಯಾಭ್ಯಾಸವನ್ನು ಮುಂದುವರೆಸಲು ಸಾಧ್ಯವಾಗದೆ ಇರುವಂಥ ವಯಸ್ಕ ಮಹಿಳೆಯರಿಗೆ ಎರಡು ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ.ಯ ಪಠ್ಯಕ್ರಮವನ್ನು ಮುಗಿಸಿ ಖಾಸಗೀ ವಿದ್ಯಾರ್ಥಿಯನ್ನಾಗಿ ಸಾರ್ವಜನಿಕ ಪರೀಕ್ಷೆಗೆ ಸಿದ್ಧಗೊಳಿಸುವ ಯೋಜನೆಯೇ ಸಂಕ್ಷಿಪ್ತ ಶಿಕ್ಷಣ ಶಾಲೆ. ಇಲ್ಲಿ ವಿದ್ಯಾಭ್ಯಾಸದ ಅವಧಿಯನ್ನು ಸಂಕ್ಷಿಪ್ತಗೊಳಿಸಲಾಗಿತ್ತು. ಸಾಮಾನ್ಯಶಾಲೆಯ ಮೂರು ವರ್ಷದ ಅವಧಿಯನ್ನು ಇಲ್ಲಿ ಎರಡು ವರ್ಷಕ್ಕೆ ಇಳಿಸಲಾಗಿತ್ತು. ಈ ಶಾಲೆಯಲ್ಲಿ ೨೦ ರಿಂದ ೩೦ ವಿದ್ಯಾರ್ಥಿನಿಯರಿಗೆ ಪ್ರವೇಶಾವಕಾಶವಿರುತ್ತಿತ್ತು. ಉಚಿತ ಉಟೋಪಚಾರ, ವಸತಿ, ಶಿಕ್ಷಣವಲ್ಲದೆ ಮಾಹೆಯಾನ ೨೦ ರೂಗಳ ವಿದ್ಯಾರ್ಥಿವೇತನವನ್ನು ಸಹ ಕೊಡಲಾಗುತ್ತಿತ್ತು. ಇಬ್ಬರು ಪೂರ್ಣಸಮಯದ ಉಪಾಧ್ಯಾಯಿನಿಯರಿದ್ದರು. ಈ ಶಾಲೆಗೆ ಬೇಕಾದ ಅನುದಾನವನ್ನು ಕೇಂದ್ರ ಸಮಾಜ ಕಲ್ಯಾಣ ಮಂಡಳಿಯು ಕೊಡುತ್ತಿತ್ತು. ಈ ಸಂಕ್ಷಿಪ್ತ ಶಿಕ್ಷಣ ಶಾಲೆ ಮತ್ತು ಕರುಣಾಗೃಹ ಏಕಕಾಲಕ್ಕೆ ಇದ್ದುದರಿಂದ ಕರುಣಾಗೃಹದ ಅಂಗವಿಕಲ ಮಕ್ಕಳು ಸಹ ಖಾಸಗಿ ವಿದ್ಯಾರ್ಥಿಗಳಾಗಿ ಶಿಕ್ಷಣ ಪಡೆಯಲು ಅನುಕೂಲವಾಯಿತು. ಗಿರಿಜಾ ಕೌಲಗಿಯವರು ಸಹ ಈ ಸಂಕ್ಷಿಪ್ತ ಶಿಕ್ಷಣ ಶಾಲೆಯ ವಿದ್ಯಾರ್ಥಿನಿಯಾಗಿ ಎಸ್.ಎಸ್. ಎಲ್.ಸಿ ಮುಗಿಸಿದರು.

(ಮುಂದುವರಿಯುವುದು.............)

ವಾಚಕ ಮಿತ್ರರಲ್ಲಿ ವಿನಂತಿ

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com